ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 26
೨೭ ಏಪ್ರಿಲ್ ೧೯೫೮
ಪುಟ ೧೦ ಬೆಲೆ: ೧೩ ನಯೇ ಪೈಸೆ

ಪುರೋಗಾಮಿ ನೀತಿಗಳಿಗಾಗಿ ಚಳವಳಿ ತೀವ್ರವಾಗಿ ನಡೆಯಲಿ

ಎನ್. ಎಲ್. ಉಪಾಧ್ಯಾಯ

"ನಮ್ಮ ಮುಂದಿರುವ ಪ್ರಜಾಪ್ರಭುತ್ವಾತ್ಮಕ ಕರ್ತವ್ಯಗಳನ್ನೂ ರಾಷ್ಟ್ರದ ಪ್ರಗತಿಯ ಗುರಿಯನ್ನೂ ಸಾಧಿಸಲು ಕಮ್ಯೂನಿಸ್ಟ್ ಪಾರ್ಟಿಯು ಬಲವಾದ ಸಾಮೂಹಿಕ ರಾಜಕೀಯ ಶಕ್ತಿಯಾಗಿ ಬೆಳೆದರೆ ಮಾತ್ರ ಸಾಧ್ಯ. ತನ್ನ ಕ್ರಿಯಾಶೀಲತೆಯಿಂದ ದೇಶದ ಎಲ್ಲ ಕ್ಷೇತ್ರಗಳಲ್ಲೂ ಜನತೆಯನ್ನು ಐಕ್ಯಗೊಳಿಸಿ ಮತ್ತು ಅವರನ್ನು ಕೃತಿಗಿಳಿಸಿ, ಸಾಮೂಹಿಕ ಹೋರಾಟಗಳಿಗೆ ದೃಢವಾದ ನಾಯಕತ್ವವನ್ನು ಕೊಡುವ ಶಕ್ತಿಯಾಗಿ ಕಮ್ಯೂನಿಸ್ಟ್ ಪಾರ್ಟಿಯು ಬೆಳೆಯಬೇಕೆಂದು" ಅಮೃತ್‌ಸರದಲ್ಲಿ ನಡೆದ ಅಖಿಲ ಭಾರತ ಕಮ್ಯೂನಿಸ್ಟ್ ಪಾರ್ಟಿ ಅಧಿವೇಶನವು ತನ್ನ ರಾಜಕೀಯ ನಿರ್ಣಯದಲ್ಲಿ ಘೋಷಿಸಿದೆ. ಪಾಲ್‌ಘಾಟ್‌ನಲ್ಲಿ ನಡೆದ ಅಧಿವೇಶನದ ನಂತರದ ಎರಡು ವರ್ಷಗಳ ಘಟನೆಗಳನ್ನೇ ವಿಮರ್ಶಿಸಿ ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಆದ ನಿರ್ಣಯವು ಬಹಳ ಮಹತ್ವದ್ದಾಗಿದೆ.

ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸುತ್ತಾ ನಿರ್ಣಯವು ವಿಶ್ವಾದ್ಯಂತ ಶಾಂತಿ ಪರ ಶಕ್ತಿಗಳು ಬಲಗೊಳ್ಳುತ್ತಿರುವುದನ್ನು ತೋರಿಸಿದೆ. ಎರಡು ಸ್ಪೂಟ್ನಿಕ್‌ಗಳನ್ನು ಹಾರಿಸಿ ಸೋವಿಯಟ್ ರಷ್ಯವು ತನ್ನ ತಾಂತ್ರಿಕ ಶಕ್ತಿಯನ್ನು ಪ್ರದರ್ಶಿಸಿದೆ. ಮತ್ತು ತಾನಾಗಿಯೇ ಅಣುಸ್ಫೋಟನೆಗಳನ್ನು ಪ್ರತಿಬಂಧಿಸಿ ದೃಢವಾದ ಶಾಂತಿಯುತ ಧೋರಣೆಯನ್ನನುಸರಿಸಿ, ಸಾಮ್ರಾಜ್ಯಶಾಹಿಗಳನ್ನು ಗೊಂದಲಕ್ಕೀಡುಮಾಡಿದೆ. ಯುದ್ಧಕೋರರು ತಮ್ಮ ಪ್ರಯತ್ನಗಳನ್ನು ಕೈಬಿಡದಿದ್ದರೂ ಅದನ್ನು ವಿಫಲಗೊಳಿಸಲು ಸಾಧ್ಯವಾಗಿದೆ.

ನಮ್ಮ ರಾಷ್ಟ್ರದ ವಿದೇಶಾಂಗ ಧೋರಣೆಯು ಇದರಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಈಗಿನ ಪರಿಸ್ಥಿತಿಯಲ್ಲಿ ಶೃಂಗ ಸಮ್ಮೇಳನವನ್ನು ಕರೆಯುವುದರಲ್ಲೂ, ಆಫ್ರಿಕ-ಏಷ್ಯಾ ಜನತೆಯ ಸೌಹಾರ್ದತೆಯನ್ನು ಬಲಗೊಳಿಸಲು ಇನ್ನೊಂದು ಆಫ್ರಿಕ-ಏಷಿಯಾ ರಾಷ್ಟ್ರಗಳ ಸಮ್ಮೇಳನ ಕರೆಯಲಿಕ್ಕೂ, ಅಣುಶಸ್ತ್ರ ಪ್ರಯೋಗಗಳನ್ನು ಪ್ರತಿಬಂಧಿಸಲಿಕ್ಕೂ, ವಸಾಹತುಶಾಹಿಯನ್ನು ಎಲ್ಲ ರೂಪಗಳಲ್ಲೂ ಕೊನೆಗಾಣಿಸಲಿಕ್ಕೂ, ಎಲ್ಲಾ ಜನತೆಯ ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕೂ, ನಡೆಯುವ ಹೋರಾಟಗಳಲ್ಲಿ ನಮ್ಮ ದೇಶ ಮುಖ್ಯ ಪಾತ್ರವಹಿಸಬೇಕಾಗಿದೆ.

ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಇಂಡೊನೇಸಿಯಾದಲ್ಲಿ ಕೈವಾಡ ನಡೆಸುತ್ತಿರುವುದನ್ನೂ, ಅಲ್ಲಿಯ ಬಂಡಾಯಗಾರರಿಗೆ ಸಹಾಯ ನೀಡುವುದನ್ನೂ ಭಾರತ ಸರಕಾರ ಖಂಡಿಸದಿರುವುದು ಶೋಚನೀಯವಾಗಿದೆ. ಇನ್ನೊಂದು ಆಫ್ರಿಕಾ ಏಷಿಯ ಸಮ್ಮೇಳನ ಕರೆಯಲು ಸಹ, ಭಾರತ ಹಿಂಜರಿಯುತ್ತಿದೆ. ನಮ್ಮ ರಾಷ್ಟ್ರದ ರಕ್ಷಣೆ ಮತ್ತು ಜನತೆಯ ಪ್ರಗತಿಯ ಯೋಜನೆಗಳು ವಿಶ್ವಶಾಂತಿಯನ್ನವಲಂಬಿಸಿವೆ. ಶಾಂತಿ ಚಳುವಳಿಯು ಬಲಗೊಂಡಿದ್ದರೂ ಸಾಕಷ್ಟು ಬೆಳೆದಿಲ್ಲ. ಶಾಂತಿ ಚಳುವಳಿಯಲ್ಲಿ ಪಾರ್ಟಿಯು ನಡೆಸಿದ ಹೋರಾಟ ದುರ್ಬಲವಾಗಿದೆ. ಈ ನ್ಯೂನತೆಯನ್ನು ಬೇಗನೇ ದೂರಮಾಡಿ ಬಲವಾದ ಮತ್ತು ವಿಶಾಲವಾದ ಶಾಂತಿ ಚಳುವಳಿಯನ್ನು ಕಟ್ಟಲು ಪಾರ್ಟಿ ಘಟಕಗಳೂ, ಪಾರ್ಟಿ ಸದಸ್ಯರೂ ತಮ್ಮ ಸರ್ವಶಕ್ತಿಯನ್ನು ಉಪಯೋಗಿಸುವುದು ಅಗತ್ಯ.

ಪ್ರಜಾಪ್ರಭುತ್ವ ಚಳವಳಿ ಹೆಚ್ಚು ಬಲಗೊಂಡಿದೆ

ಕೇರಳದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ಕಾಂಗ್ರೆಸ್ಸಿನ ಗುತ್ತೇದಾರಿ ಆಡಳಿತೆಯನ್ನು ಮುರಿದು ಕಮ್ಯೂನಿಸ್ಟ್ ಪಾರ್ಟಿಯ ನಾಯಕತ್ವದಲ್ಲಿ ಸರಕಾರ ರಚನೆ ಮಾಡಿರುವುದು ವಿಶ್ವದ ಗಮನವನ್ನು ಸೆಳೆದಿದೆ. ಕೇರಳದ ಈ ಘಟನೆಯು ರಾಷ್ಟ್ರದ ರಾಜಕೀಯ ಜೀವನದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಇದು ಇತ್ತೀಚಿಗೆ ಬೆಳೆಯುತ್ತಿರುವ ಪ್ರಜಾಪ್ರಭುತ್ವ ಚಳುವಳಿಯ ಉನ್ನತ ಮಟ್ಟವಾಗಿದೆ. ಇತರ ಕಡೆಗಳಲ್ಲೂ ಇದು ಬೆಳೆದಿದೆ. 12 ಮಿ.ಲಿಯ ಮತ ಗಳಿಸಿ ಕಮ್ಯೂನಿಸ್ಟ್ ಪಾರ್ಟಿಯು ಮುಖ್ಯ ವಿರೋಧ ಪಕ್ಷವಾಗಿ ಹೆಚ್ಚು ಬಲಗೊಂಡು ಮುಂದುವರಿದಿದೆ.

ಚುನಾವಣೆಯ ನಂತರದ ಕಾಲಘಟ್ಟದಲ್ಲೂ ಈ ಚಳುವಳಿ ಮುಂದುವರಿದಿದೆ. ಜನತೆಯ ಕಷ್ಟಗಳು ತೀವ್ರಗೊಂಡಿವೆ. ಜನತೆಯ ಮುಂದಿರುವ ಯಾವೊಂದು ಸಮಸ್ಯೆಯನ್ನು ಬಗೆಹರಿಸಲಿಕ್ಕಾಗಲಿ ಅಥವಾ ಅದನ್ನು ಮನಃಪೂರ್ವಕವಾಗಿ ಎದುರಿಸಲಿಕ್ಕಾಗಲಿ ಸರಕಾರದಿಂದ ಸಾಧ್ಯವಾಗಲಿಲ್ಲ. ಚುನಾವಣಾ ಘೋಷಣೆಯಲ್ಲಿ ಕೊಟ್ಟ ವಚನಗಳನ್ನೆಲ್ಲಾ ಚುನಾವಣೆಯ ನಂತರ ಕಾಂಗ್ರೆಸ್ ತುಚ್ಛ ಮನೋಭಾವದಿಂದ ಮುರಿದಿದೆ. ಹೊಸ ಮತ್ತು ಭಾರವಾದ ತೆರಿಗೆಗಳನ್ನು ಹೊರಿಸಿದೆ. ಹಣದುಬ್ಬರಕ್ಕೆಡೆಕೊಟ್ಟಿದೆ. ಎಲ್ಲ ಘಟ್ಟಗಳಲ್ಲೂ ಈ ಹೊರೆ ಭಾರವು ಏರುತ್ತಿದ್ದು, ಬೆಲೆಗಳು ಏರುತ್ತಿರುವುದರಿಂದ, ಜನತೆಯ ಪರಿಸ್ಥಿತಿ ಹದಗೆಡುತ್ತಿದೆ. ಇದರ ವಿರುದ್ಧ ಜನತೆಯ ಚಳುವಳಿ ಬಲಗೊಳ್ಳುತ್ತಿದೆ.

ಕುಗ್ಗುತ್ತಿರುವ ಕಾಂಗ್ರೆಸ್ ವರ್ಚಸ್ಸು

ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್ ಇನ್ನೂ ಹೆಚ್ಚು ವರ್ಚಸ್ಸನ್ನು ಪಡೆದಿದೆ. ಆದರೆ ಜನತೆಯ ಮೇಲೆ ವರ್ಚಸ್ಸು ಕ್ರಮೇಣ ಕ್ಷೀಣವಾಗುತ್ತಿದೆ ಮತ್ತು ಅದರ ಜನಬೆಂಬಲ ಕಡಿಮೆಯಾಗುತ್ತಿದೆ. ಮುಂಧ್ರಾ ಪ್ರಕರಣದಿಂದ ಕೆಲ ಕಾಂಗ್ರೆಸ್ಸಿಗರಲ್ಲಿ ಅವರ ನಾಯಕರ ಮೇಲಿದ್ದ ನಂಬಿಕೆ ಕಡಿಮೆಯಾಗಿದೆ. ಜಾಗ್ರತೆ ಪ್ರಜಾಪ್ರಭುತ್ವಾತ್ಮಕ ಜನತೆಯಿಂದ ದೂರವಾಗುತ್ತಾ, ಒಳಜಗಳ ಮತ್ತು ಒಡಕುಗಳಿಂದ ಶಕ್ತಿಹೀನವಾಗುತ್ತಾ ಕಾಂಗ್ರೆಸ್ ಸಂಸ್ಥೆಯು ಈಗ ರಾಜಕೀಯ ಮತ್ತು ನೈತಿಕ ಅಧಃಪತನದ ಸ್ಥಿತಿಯಲ್ಲಿದೆ. ಅದು ಪರಿಹರಿಸಲಾಗದ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಚುನಾವಣೆಯ ನಂತರ ಅದು ಇನ್ನೂ ತೀವ್ರಗೊಂಡಿದೆ. ಕೆಲವು ರಾಜ್ಯಗಳಲ್ಲಿ ಇವು ಗಂಭೀರವಾಗಿವೆ. ಮಂತ್ರಿಗಳಿಗೂ ಇದು ಆವರಿಸಿದೆ. ಸಂಸ್ಥೆಯೊಳಗೆ ಭಿನ್ನಾಭಿಪ್ರಾಯಗಳು ತೀವ್ರವಾಗುತ್ತಿವೆ. ಪ್ರಗತಿಗಾಮಿ ಮನೋಭಾವದ ಕಾಂಗ್ರೆಸ್ಸಿಗರು ಅನೇಕ ಸರಕಾರದ ಧೋರಣೆಗಳನ್ನು ವಿರೋಧಿಸಿದ್ದಾರೆ ಮತ್ತು ಕೆಲವು ಕಡೆ ಬಹಿರಂಗವಾಗಿಯೇ ಶಾಸನ ಸಭೆಗಳಲ್ಲೂ, ಲೋಕ ಸಭೆಯಲ್ಲೂ ಟೀಕಿಸುತ್ತಿದ್ದಾರೆ.

ಪ್ರತಿಗಾಮಿ ಮತ್ತು ವಿದ್ರೋಹಿ ಶಕ್ತಿಗಳ ಬೆಳವಣಿಗೆ

ಈ ಅಂಶಗಳನ್ನು ಮಾತ್ರ ಗಮನಿಸಿದರೆ ಸಾಲದು. ಕಮ್ಯೂನಿಸ್ಟ್ ಮತ್ತಿತರ ಪ್ರಜಾಪ್ರಭುತ್ವ ಶಕ್ತಿಗಳು ಜನತೆಯಲ್ಲಿರುವ ಅತೃಪ್ತಿಗನುಗುಣವಾಗಿ ಬೆಳೆದುಬಂದಿಲ್ಲವೆಂಬುದನ್ನು ಗಮನಿಸುವುದಗತ್ಯ. ಜಾತೀಯ ಮತ್ತು ಪಾಳೆಯಗಾರಿ ಪ್ರತಿಗಾಮಿ ಪಕ್ಷಗಳಾದ ಜನಸಂಘ, ಅಕಾಲಿಪಕ್ಷ, ಒರಿಸ್ಸಾದ ಗಣತಂತ್ರ ಪರಿಷದ್ ಮತ್ತು ಪ್ರತ್ಯೇಕತೆಯನ್ನು ಪ್ರತಿಪಾದಿಸುವ ತಮಿಳುನಾಡಿನ ಡಿ. ಎಂ. ಕೆ. ಮುಂತಾದುವು ಈ ಪರಿಸ್ಥಿತಿಯನ್ನು ತಮ್ಮ ಬೆಳವಣಿಗೆಗೆ ಉಪಯೋಗಿಸುತ್ತಿವೆ. ಕಾಂಗ್ರೆಸ್ಸಿನ ವರ್ಚಸ್ಸು ಕಡಿಮೆಯಾಗುತ್ತಿರುವಾಗ ಅನೇಕ ಕಾಂಗ್ರೆಸ್ಸಿಗರೂ ಮತ್ತು ಅವರ ವಿರೋಧಿಗಳೂ ಚುನಾವಣೆಗಳಲ್ಲಿ ಕೋಮುವಾರು ಮತ್ತು ಜಾತೀಯ ಪ್ರಚಾರಕ್ಕಿಳಿದು ಜನತೆಯಲ್ಲಿ ಒಡಕುಂಟುಮಾಡಲು ಯತ್ನಿಸುತ್ತಾರೆ. ಈ ಬೆಳವಣಿಗೆಯು ಪ್ರಜಾಪ್ರಭುತ್ವಕ್ಕೂ, ಜಾತ್ಯತೀತತೆಕ್ಕೂ ಮತ್ತು ಭಾರತದ ಐಕ್ಯತೆಗೂ ಅಪಾಯಕಾರಿಯಾಗಿದೆ.

ಯೋಜನೆಯ ಬಿಕ್ಕಟ್ಟು

ದೇಶದ ರಾಜಕೀಯ ಪರಿಸ್ಥಿತಿಯು ಆರ್ಥಿಕ ಪರಿಸ್ಥಿತಿಯನ್ನವಲಂಭಿಸಿದೆ ಮತ್ತು ಅದರಿಂದಲೇ ಉದ್ಭವಿಸಿದೆ. ಈಗ ದ್ವಿತೀಯ ಯೋಜನೆಯ ಮೂರನೇ ವರ್ಷ ನಡೆದಿದೆ. ಅದರ ಗುರಿ ಮತ್ತು ಧ್ಯೇಯಗಳನ್ನು ಎಲ್ಲ ಜನ ವಿಭಾಗವೂ, ನಮ್ಮ ಪಾರ್ಟಿಯೂ ಸ್ವಾಗತಿಸಿತ್ತು. ಆದರೆ ಕೆಲವು ಅಂಶಗಳನ್ನು ಸ್ವಾಗತಿಸಿದ್ದರೂ ಅದರಲ್ಲಿದ್ದ ದೋಷಗಳನ್ನು ಟೀಕಿಸಿದ್ದೆವು. ಮುಖ್ಯವಾಗಿ ಹಿರಿಬಂಡವಾಳಶಾಹಿಗಳಿಗೆ ಕೊಟ್ಟಿರುವ ಸವಲತ್ತು ಮತ್ತು ರಿಯಾಯಿತಿಗಳು, ವಿದೇಶಿ ಬಂಡವಾಳದ ಮೇಲೆ ಹೆಚ್ಚಿನ ಅವಲಂಬನೆ, ಸಾಮಾನ್ಯ ಜನತೆಯ ಮೇಲೆ ತೆರಿಗೆ ಮುಂತಾದ ಹೆಚ್ಚಿನ ಹೊರೆಯನ್ನು ಹಾಕಿ ಮತ್ತು ಡೆಫಿಸಿಟ್ ಫೈನಾನ್ಸಿಂಗ್ (ಖೋತಾ ಬಜೆಟ್)ಗಳ ಮೂಲಕ ಆಂತರಿಕವಾಗಿ ಹಣ ಒದಗಿಸುವ ಯೋಜನೆ, ಅಧಿಕಾರಿ ವರ್ಗದ ಮೇಲಿನ ಅವಲಂಬನೆ ಮುಂತಾದುವುಗಳನ್ನು ವಿರೋಧಿಸಿದ್ದೇವೆ. ಇದರಿಂದ ಈಗಿನ ಗುರಿಯನ್ನು ಮುಟ್ಟಲು ಯೋಜನೆಯ ಭವಿಷ್ಯಕ್ಕೂ ಅಪಾಯವೆಂದು ಎಚ್ಚರಿಸಿದ್ದೆವು (ಪಾಲ್ಘಾಟ್ ನಿರ್ಣಯ).

ನಾವು ಕೊಟ್ಟ ಮುನ್ನೆಚ್ಚರಿಕೆ ಕಡೆಗಣಿಸಲ್ಪಟ್ಟಿತು. ಆದರೆ ಅವು ನಿಜವೆಂಬುದು ಈಗ ಸ್ಪಷ್ಟವಾಗಿದೆ. ಯೋಜನೆಯ ಮೂರನೇ ವರ್ಷವಾದ ಈ ವರ್ಷದಲ್ಲಿ ಅಭಿವೃದ್ಧಿಯ ವೇಗ ಕಡಿಮೆಯಾಗಿದೆ. ಭೂಸುಧಾರಣೆಯು ಕಡೆಗಣಿಸಲ್ಪಟ್ಟಿದೆ. ಆಹಾರದ ಅಭಾವ ಹೆಚ್ಚಾಗಿದೆ. ಕೈಗಾರಿಕೆಗಳಲ್ಲೂ ಬಿಕ್ಕಟ್ಟು ತಲೆಎತ್ತಿದೆ. ಉಪಯೋಗ ವಸ್ತುಗಳ ಉತ್ಪಾದನಾ ಕ್ಷೇತ್ರದಲ್ಲಿ ಉತ್ಪಾದನೆಯು ಇಳಿಮುಖವಾಗಿದೆ. ಹಲವು ಹತ್ತಿ ಗಿರಣಿಗಳು ಬಂದಾಗಿ ಸಹಸ್ರಾರು ಜನರು ನಿರುದ್ಯೋಗಿಗಳಾಗಿದ್ದಾರೆ. ಜನತೆಯ ಮೇಲಿನ ತೆರಿಗೆ ಹೆಚ್ಚಾಗಿ ಅವರ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಎಲ್ಲಾ ಬೆಲೆಗಳೂ ಏರುತ್ತಿವೆ. ಆಂತರಿಕವಾಗಿ ಬಂಡವಾಳ ಎತ್ತಲು ಸಾಧ್ಯವಾಗದಿರುವಾಗ ಖಾಸಗಿ ಕ್ಷೇತ್ರದವರಿಗೆ ಆಮದು ಮಾಡಲು ಸೌಕರ್ಯ ಒದಗಿಸಿ ವಿದೇಶಿ ವಿನಿಮಯದ ಬಿಕ್ಕಟ್ಟು ಬಂದಿದೆ. ಖಾಸಗಿ ಕ್ಷೇತ್ರದವರು ವಿಪರೀತ ಲಾಭಮಾಡಿ, ಹೆಚ್ಚು ಅಭಿವೃದ್ಧಿ ಹೊಂದಿರುವಾಗ ಸರಕಾರಿ ಕ್ಷೇತ್ರದಲ್ಲಿ ಯೋಜನೆಗಳನ್ನು ಕೈಬಿಡಲಾಗುತ್ತಿದೆ.

(ಕೊನೇ ಪುಟ ನೋಡಿ)

★ ರಾಷ್ಟ್ರೀಯ - ಅಂತರರಾಷ್ಟ್ರೀಯ ★

ಕಮ್ಯೂನಿಸ್ಟ್ ಪಾರ್ಟಿ ಅಧಿವೇಶನ—

ಕಾಂಗ್ರೆಸ್ ನಾಯಕರ ವ್ಯರ್ಥಪ್ರಲಾಪ

ಭಾರತ ಕಮ್ಯೂನಿಸ್ಟ್ ಪಕ್ಷದ ಅಮೃತಸರ ಅಧಿವೇಶನದ ತೀರ್ಮಾನಗಳು ದೇಶಾದ್ಯಂತ ಎಲ್ಲ ಪ್ರಜಾಪ್ರಭುತ್ವವಾದಿಗಳ ಮೆಚ್ಚಿಗೆಯನ್ನು ಪಡೆದಿದೆ. ಪ್ರತಿಗಾಮಿ ಪತ್ರಿಕೆಗಳು ಅಗ್ರ ಲೇಖನಗಳನ್ನು ಬರೆದು ಅಧಿವೇಶನದ ತೀರ್ಮಾನಗಳನ್ನು ಅಲ್ಲಗಳೆದಿವೆ. ಎಂದಿನಂತೆ ಪರಂಪರೆಯಾಗಿ ಬಂದಿರುವ ಆರೋಪಗಳನ್ನು ಹೊರೆಸಿವೆ.

ಅಮೃತಸರ ಅಧಿವೇಶನವು ಮುಕ್ತಾಯವಾದನಂತರ ಕಾಂಗ್ರೆಸ್ಸಿನ 'ಮಹಾ' ನಾಯಕರಾದ ಶ್ರೀಮನ್ನಾರಾಯಣರವರು ಲೇಖನವೊಂದು ಬರೆದು ಅದರಲ್ಲಿ ಕಮ್ಯೂನಿಸ್ಟ್ ಪಕ್ಷವು ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲಿಸುವುದು ಸುಳ್ಳೆಂದೂ, ಅಧಿವೇಶನದ ತೀರ್ಮಾನಗಳು ಜನರನ್ನು ಮೋಸಗೊಳಿಸುವುದಾಗಿದೆಯೆಂದು ಹೇಳಿದ್ದಾರೆ.

ಇತ್ತೀಚೆಗೆ ದೆಹಲಿಯಲ್ಲಿ ಸಮಾವೇಶಗೊಂಡಿದ್ದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಮ್ಮೇಳನದಲ್ಲಿ ಅಮೃತಸರ ಅಧಿವೇಶನದ ತೀರ್ಮಾನಗಳನ್ನು ಕುರಿತು ಗಂಭೀರವಾಗಿ ಪರಿಶೀಲಿಸಲಾಯಿತೆಂದು ತಿಳಿದು ಬಂದಿದೆ. ಕಮ್ಯೂನಿಸ್ಟ್ ಪಾರ್ಟಿಯ ಸವಾಲನ್ನು ಯಶಸ್ವಿಯಾಗಿ ಎದುರಿಸಲು ಕಾಂಗ್ರೆಸು ತನ್ನ ಕೆಲಸವನ್ನು ಹೆಚ್ಚು ಸಫಲಗೊಳಿಸಬೇಕೆಂದು ಕರೆ ಕೊಡಲಾಗಿದೆ. ಕಾಂಗ್ರೆಸ್ಸಿನ ಕೆಲವು ನಾಯಕರು ಕಮ್ಯೂನಿಸ್ಟ್ ಪಾರ್ಟಿಯ ಅಧಿವೇಶನದ ಬಗ್ಗೆ ಇತ್ತಿರುವ ಹೇಳಿಕೆಗಳು ಪ್ರಚೋದಕವಾಗಿವೆ. ಗೃಹ ಸಚಿವ ಪಂಡಿತ್ ಪಂತ್‌ರವರು "ಕಮ್ಯೂನಿಸ್ಟ್ ಪಾರ್ಟಿಯು ಪ್ರಜಾಪ್ರಭುತ್ವವಾದಿ ಮತ್ತು ಶಾಂತಿಯುತ ಕ್ರಮಗಳನ್ನು ಅನುಸರಿಸುವುದು ಸ್ವಾಗತಾರ್ಹವಾಗಿದೆ. ಕೊನೆಯ ಪಕ್ಷ ಕಾಗದದ ಮೇಲಾದರೂ ಅವರು ಮಾರ್ಕ್ಸ್‌ವಾದವನ್ನು ತ್ಯಜಿಸಿದ್ದಾರೆ (!)" ಎಂದು ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಈ ರೀತಿ ಹೇಳಿದ್ದಾರೆ, "ಶಾಂತಿಯುತವಾದ ಸಾಧನ ಮತ್ತು ಮಾರ್ಕ್ಸ್‌ವಾದ ಎರಡಕ್ಕೂ ಸರಿಹೊಂದುವುದಿಲ್ಲ. ಆಗದೇ ಇರುವುದನ್ನು ಹೇಳಿ ಕಮ್ಯೂನಿಸ್ಟ್ ಪಾರ್ಟಿಯು ಬುದ್ಧಿ ಜೀವಿಗಳನ್ನು ಮತ್ತು ಕಾರ್ಮಿಕವರ್ಗಗಳನ್ನು ಗೊಂದಲಕ್ಕೀಡುಮಾಡಲು ಯತ್ನಿಸುತ್ತಿದೆ" ಎಂದು ಹೇಳಿದ್ದಾರೆ.

ಕಾಂಗ್ರೆಸ್ ನಾಯಕರುಗಳ ಈ ಉದ್ಗಾರಗಳು ಕಮ್ಯೂನಿಸ್ಟ್ ಪಕ್ಷದ ಇತಿಹಾಸಿಕ ತೀರ್ಮಾನಿಗಳಿಂದಾಗಿ ಭೀತರಾಗಿರುವುದನ್ನು ವ್ಯಕ್ತ ಗೊಳಿಸುತ್ತದೆ. ಒಳಜಗಳಗಳು, ಅಧಿಕಾರಲಾಲಸೆ ಲಂಚ ಖುಷುವತ್ತುಗಳಿಂದ ತುಂಬಿಕೊಂಡು ತೀವ್ರವಾಗಿ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ಸಿನ ಸಂಘಟನಾ ಅವಸ್ಥೆಯನ್ನು ವ್ಯಕ್ತಗೊಳಿಸುತ್ತದೆ.

ಕೇರಳ ವಿದ್ಯಾಮಸೂದೆ ಸುಪ್ರೀಂ ಕೋರ್ಟಿನಲ್ಲಿ

ಕೇರಳ ವಿದ್ಯಾಭ್ಯಾಸ ಮಸೂದೆ ಸುಪ್ರೀಂ ಕೋರ್ಟಿನ ಮುಂದೆ ಇದೇ ತಿಂಗಳು 29 ನೇ ತಾರೀಖಿನಂದು ಬರಲಿದೆ. ಕೇರಳ ಸರಕಾರವು ಈಗಾಗಲೆ ತನ್ನ ಹೇಳಿಕೆಯನ್ನು ಸಿದ್ಧಗೊಳಿಸಿದೆಯೆಂದು ತಿಳಿದುಬಂದಿದೆ. ಕೇರಳ ಸರಕಾರದ ಪರವಾಗಿ ಅಡ್ವೊಕೇಟ್ ಜನರಲ್ ಶ್ರೀ. ಸೂರ್ಯನಾರಾಯಣ ಐಯ್ಯರ್ ಮತ್ತು ಸುಪ್ರಸಿದ್ಧ ಬ್ರಿಟಿಷ್ ವಕೀಲರಾದ ಮಿ॥ ಡಿ. ಎನ್. ಪ್ರಿಟ್ ವಾದ ಮಾಡಲಿದ್ದಾರೆ. ಖಾಸಗಿ ಶಾಲಾ ಉಪಾಧ್ಯಾಯರುಗಳ ಫೆಡರೇಷನ್ ಪರವಾಗಿ ಡ॥ ಸಿ. ಪಿ. ರಾಮಸ್ವಾಮಿ ಅಯ್ಯರ್ ವಾದಿಸಲಿದ್ದಾರೆಂದು ಹೇಳಲಾಗಿದ್ದು, ಅಸ್ವಸಸ್ಥತೆಯ ಕಾರಣದಿಂದ ಅವರು ವಾದಿಸುವುದಿಲ್ಲವೆಂದು ತಿಳಿದು ಬಂದಿದೆ.

ಖಾಸಗೀ ಶಾಲೆಗಳ ಮ್ಯಾನೇಜ್‌ಮೆಂಟಿನ ಪರವಾಗಿ ಶ್ರೀ ಕೆ. ಎಂ. ಮುನ್ಷಿಯವರು ವಾದಿಸಲಿದ್ದಾರೆ. ಸಮಾಜ ಸುಧಾರಣೆಗಳ ವಿರೋಧವಾಗಿ ವಕಾಲತ್ತು ವಹಿಸುವುದರಲ್ಲಿ ಇವರು ಈಗಾಗಲೇ ಹೆಸರುಗಳಿಸಿದ್ದಾರೆ. ಮುನ್ಷಿಯವರು ವಾದಿಸದಿದ್ದಲ್ಲಿ ಕೇರಳದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಪನಂಪಳ್ಳಿ ಗೋವಿಂದಮೆನನ್ ವಾದಿಸುವರೆಂದು ತಿಳಿದು ಬಂದಿದೆ.

ಲೋಕಸಭೆಯಲ್ಲಿ ಹೊಸ ವಿರೋಧಪಕ್ಷ?

ಸಂಯುಕ್ತ ಸೋಷಿಲಿಸ್ಟ್ ಪಕ್ಷ ಎಂಬ ನೂತನ ವಿರೋಧ ಪಕ್ಷವು ರಚಿತವಾಗಲಿದೆಯೆಂದು ತಿಳಿದು ಬಂದಿದೆ. ಶ್ರೀ ಆಚಾರ್ಯ ಕೃಪಲಾನಿಯವರು ಇದರ ನಾಯಕರಾಗಿರುವರೆಂದು ಹೇಳಲಾಗಿದೆ. ಈ ಹೊಸ ವಿರೋಧ ಪಕ್ಷದ ಗುಂಪಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನು ಬಿಟ್ಟು ಉಳಿದ ಪಕ್ಷಗಳು ಒಕ್ಕೂಟವಾಗಿರುವುದೆಂದೂ, ಇದರ ಸಂಖ್ಯಾಬಲವು 40 ಆಗಿರುವುದೆಂದೂ ತಿಳಿದು ಬಂದಿದೆ. ಈ ಒಕ್ಕೂಟದಲ್ಲಿ ಮಹಾ ಗುಜರಾತ್ ಜನತಾ ಪರಿಷದ್, ಫಾರ್‌ವರ್ಡ್ ಬ್ಲಾಕ್, ಕ್ರಾಂತಿಕಾರಿ ಸೋಷಿಲಿಸ್ಟ್ ಪಕ್ಷ, ಲೋಕ ಸೇವಕ ಸಂಘ, ರೈತ ಮತ್ತು ಕಾರ್ಮಿಕ ಪಕ್ಷ, ಸಂಯುಕ್ತ ಮಹಾರಾಷ್ಟ್ರ ಸಮಿತಿ ಮತ್ತು ಮಹಾ ಗುಜರಾತ್ ಸಮಿತಿಯ ಬೆಂಬಲ ಪಡೆದ ಸ್ವತಂತ್ರರು, ಪ್ರಜಾ ಸೋಷಿಲಿಸ್ಟ್ ಪಕ್ಷಗಳು ಇರುವುವೆಂದು ತಿಳಿದು ಬಂದಿದೆ. ಈ ವಿರೋಧ ಪಕ್ಷವು ಹೇಗೆ ರೂಪುಗೊಂಡು ಕೆಲಸ ಮಾಡುವುದೆಂದು ಕಾದು ನೋಡಬೇಕಾಗಿದೆ. ಕೆಲವು ಕಾಲದಿಂದ ಸೋಷಿಲಿಸ್ಟ್ ಮತ್ತು ಪ್ರಜಾ ಸೋಷಿಲಿಸ್ಟ್ ಪಕ್ಷಗಳ ಒಕ್ಕೂಟದ ಮಾತುಕತೆಗಳು ನಡೆಯುತ್ತಿದ್ದು ವಿಫಲವಾದುದರಿಂದಾಗಿ ಈಗ ಈ ಹೊಸ ಯತ್ನವನ್ನು ಮಾಡಲಾಗಿದೆ.

ರಷ್ಯದತ್ತ ಅಮೆರಿಕದ ಅಣುಶಸ್ತ್ರ ಸಜ್ಜಿತ ಬಾಂಬರುಗಳ ಹಾರಾಟ

ರಷ್ಯದತ್ತ ಅಮೇರಿಕದ ಅಣುಅಸ್ತ್ರಗಳನ್ನು ಹೊತ್ತ ಬಾಂಬರುಗಳು ಹಾರಾಡುತ್ತಿವೆಯೆಂದು ಸೋವಿಯತ್ ಯೂನಿಯನ್ ವಿಶ್ವ ಸಂಸ್ಥೆಗೆ ದೂರು ಕೊಟ್ಟಿದೆ.

ಏಪ್ರಿಲ್ 18ರಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ ಸೋವಿಯತ್ ವಿದೇಶಾಂಗ ಮಂತ್ರಿ ಆಂದ್ರೆ ಗ್ರೋಮಿಕೋರವರು ಅಮೆರಿಕದ ಈ ಕೃತ್ಯವು ಶಾಂತಿಗೆ ಅಪಾಯ ಉಂಟುಮಾಡುವಂಥಾದ್ದಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ಅಮೆರಿಕದ ಬಾಂಬರುಗಳ ಹಾರಾಟ ಬೆಂಕಿಯೊಡನೆ ಸರಸವಾಡಿದಂತೆ ಮುಂದುವರಿದರೆ ಸಹಿಸಲಸಾಧ್ಯವಾದ ಅಪಾಯವೆಂದೂ, ಅಮೇರಿಕದ ಸೇನಾದಳದ ಬೇಜವಾಬ್ದಾರಿಯುತ ಅಥವಾ ಪ್ರಚೋದನಾತ್ಮಕ ಕಾರ್ಯಗಳ ಪರಿಣಾಮವಾಗಿ ಯಾವ ಘಳಿಗೆಯಲ್ಲಾದರೂ ಇದ್ದಕ್ಕಿದ್ದಂತೆ ಆರಂಭವಾಗಬಹುದಾದ ಹೊಸ ಸಮರದಿಂದ ಮಾನವ ಜನಾಂಗವು ಹಲವಾರು ಬಾರಿ ಕೇವಲ ಕೂದಲೆಳೆಯಷ್ಟು ದೂರವಿರುತ್ತೆಂದೂ ತಿಳಿಸಿದ್ದಾರೆ.

ಅನುಮಾನಾಸ್ಪದವಾದ ವಸ್ತು ರಾಡಾರ್ ಸ್ಕ್ರೀನಿನ ಮೇಲೆ ಗೋಚರವಾದಾಗ ಕೆಲವು ನಿಶ್ಚಿತ ಸ್ಥಳಗಳಿಗೆ ಅಮೆರಿಕದ ಬಾಂಬರುಗಳನ್ನು ಕಳಿಸಲಾಗಿತ್ತೆಂದು ಅಮೆರಿಕದಲ್ಲಿ ವರದಿಗಳು ಪ್ರಕಟವಾಗಿದ್ದುವು.

ವಿಶ್ವ ಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲ್‌ನಲ್ಲಿ ಶಾಶ್ವತ ಪ್ರತಿನಿಧಿಯಾಗಿರುವ ಆರ್ಕೆಡೀ ಸೊಬೊಲೋವ್‌ರವರು ಸೋವಿಯತ್ ಯೂನಿಯನ್ನಿನ ದೂರನ್ನು ಸಲ್ಲಿಸಿದ್ದರು. ಏಪ್ರಿಲ್ 22ರಂದು ನಡೆದ ಸೆಕ್ಯೂರಿಟಿ ಕೌನ್ಸಿಲ್ ಸಭೆಯಲ್ಲಿ ಸೊಬೊಲೋವ್‌ರವರು ಸೋವಿಯತ್ ಯೂನಿಯನ್ನಿನ ದೂರನ್ನು ವಿವರಿಸಿ, ಸೋವಿಯತ್ ಯೂನಿಯನ್ನಿನತ್ತ ಅಣು ಮತ್ತು ಜಲಜನಕ ಬಾಂಬುಗಳನ್ನು ಹೊತ್ತ ಬಾಂಬರು ವಿಮಾನಗಳನ್ನು ಕಳಿಸುವುದನ್ನು ಅಮೆರಿಕ ನಿಲ್ಲಿಸಬೇಕೆಂದು ಒತ್ತಾಯಪಡಿಸಿದರು.

ಈ ತಿಂಗಳಲ್ಲಿ ಸೆಕ್ಯೂರಿಟಿ ಕೌನ್ಸಿಲಿನ ಅಧ್ಯಕ್ಷರಾಗಿರುವ ಅಮೆರಿಕದ ಪ್ರತಿನಿಧಿ ಹೆನ್ರಿ ಕ್ಯಾಬಟ್ ಲಾಡ್ಜ್‌ರವರು ಸಭೆ ನಡೆಸುವುದರಲ್ಲಿ ಸರಿಯಾದ ಕ್ರಮ ವಹಿಸಲಿಲ್ಲವೆಂದು ಸೋವಿಯತ್ ಪ್ರತಿನಿಧಿಗಳು ಪ್ರತಿಭಟನಾರ್ಥವಾಗಿ ತಮ್ಮ ನಿರ್ಣಯವನ್ನು ಹಿಂತೆಗೆದುಕೊಂಡಿದ್ದಾರೆ.

ಅಮೆರಿಕದ ವಕ್ತಾರರು ಸೋವಿಯತ್ ಯೂನಿಯನ್ನಿನ ಆರೋಪವನ್ನು ಸುಳ್ಳೆಂದು ಹೇಳಿದ್ದಾರೆ. ಆದರೆ ಅಮೆರಿಕದ ಪತ್ರಿಕೆಗಳೇ ಬಾಂಬರುಗಳ ಹಾರಾಟದ ವಿಷಯವನ್ನು ಪ್ರಕಟಿಸಿವೆ. ಯುದ್ಧ ಪ್ರಚೋದನೆಯ ಕಾರ್ಯದಲ್ಲಿ ನಿಪುಣರಾಗಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಇಂಥ ಕೃತ್ಯಗಳನ್ನು ನಿಲ್ಲಿಸದಿದ್ದಲ್ಲಿ ಮಾನವಕೋಟಿಯ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಅಂತರರಾಷ್ಟ್ರೀಯ ಉದ್ರಿಕ್ತತೆಯ ವಾತಾವರಣವನ್ನು ಸಡಿಲಗೊಳಿಸಲು ಶೃಂಗ ಸಮ್ಮೇಳನ ನಡೆಸಲು ಮಾತುಕತೆಗಳಾಗುತ್ತಿರುವಾಗ ಇಂಥ ಘಟನೆಯು ಸಂಭವಿಸಿರುವುದು ಕಳವಳ ತರುವಂಥದ್ದಾಗಿದೆ. ಅಮೆರಿಕನ್ ಸಾಮ್ರಾಜ್ಯವಾದಿಗಳ ಈ ಕೃತ್ಯ ಖಂಡನೀಯವಾಗಿದೆ. ಇಂಥ ಪ್ರಚೋದನೆಯ ಕಾರ್ಯಗಳು ಕೂಡಲೇ ನಿಲ್ಲಿಸಲ್ಪಡಬೇಕೆಂದು ವಿಶ್ವದ ಜನತೆ ಒತ್ತಾಯಪಡಿಸಬೇಕಾಗಿದೆ.

ಸಿಲೋನಿನಲ್ಲಿ ಸರಿಕಾರೀ ನೌಕರ ಮುಷ್ಕರ

ಸರಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 1,50,000 ಕೆಲಸಗಾರರು ಮುಷ್ಕರ ಹೂಡಿದ್ದಾರೆ. 118 ಸಂಘಗಳನ್ನು ಒಳಗೊಂಡ ಪಬ್ಲಿಕ್ ಕೆಲಸಗಾರರ ಸಂಘವು ಮುಷ್ಕರದ ಕರೆಯನ್ನಿತ್ತಿದೆ. ಏಪ್ರಿಲ್ 22ರಿಂದ ಕೊಲಂಬೋದಲ್ಲಿನ ಅಂಚೆ ಮತ್ತು ತಂತಿ ನೌಕರರು ಮುಷ್ಕರ ಆರಂಭಿಸಿದ್ದಾರೆ. ಇವರೊಂದಿಗೆ ಇತರ ನೌಕರರೂ ರೈಲ್ವೆ ಕೆಲಸಗಾರರೂ 23ನೇ ತಾರೀಖಿನಿಂದ ಮುಷ್ಕರ ಹೂಡುವವರಿದ್ದಾರೆ.

ಸಿಲೋನಿನ ಪ್ರಧಾನಿಗಳ ಸಮ್ಮುಖದಲ್ಲಿ ಅವರ ಬೇಡಿಕೆಗಳಾದ, ಕೆಲಸದ ಸೌಲಭ್ಯಗಳನ್ನು ಉತ್ತಮ ಗೊಳಿಸುವುದು, ಜೀವನ ಭತ್ಯ ಹೆಚ್ಚಿಸುವುದು, ಸರಕಾರಿ ಕೆಲಸಗಾರರು ರಾಜಕೀಯದಲ್ಲಿ ಭಾಗವಹಿಸುವ ಹಕ್ಕು ಇರಬೇಕೆನ್ನುವುದು ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ಪುನರ್ಘಟನೆಯಾಗಬೇಕೆಂಬುದು ಇತ್ಯಾದಿಗಳ ಬಗ್ಗೆ ಸಂಧಾನವು ವಿಫಲವಾದುದರಿಂದಾಗಿ ಮುಷ್ಕರ ಆರಂಭವಾಗಿದೆ.

ಮುಷ್ಕರವನ್ನು ಮುರಿಯಲು ಸರಕಾರವು ಸೇನಾಪಡೆಗಳನ್ನು ಮತ್ತು ನೌಕಾಪಡೆಯನ್ನು ನೆರವಿಗೆ ತೆಗೆದುಕೊಂಡಿದೆ.

ಸಿಲೋನಿನಲ್ಲಿ ಸರಕಾರೀ ನೌಕರರ ದೊಡ್ಡ ಮುಷ್ಕರ ನಡೆಯುತ್ತಿರುವುದು ಇದೇ ಮೊದಲಬಾರಿ.

ಅಮೆರಿಕದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ

ಏಪ್ರಿಲ್ 5ರ ಹೊತ್ತಿಗೆ ಅಮೆರಿಕದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಯುದ್ಧಾನಂತರದಲ್ಲಿ ಅತ್ಯಂತ ಹೆಚ್ಚಿನವಾಗಿತ್ತು ಎಂದು ಅಮೇರಿಕದ ಲೇಬರ್ ಇಲಾಖೆಯ ಪ್ರಕಟಣೆಯೊಂದು ತಿಳಿಸುತ್ತದೆ.


ನಿರುದ್ಯೋಗ ಭತ್ಯವನ್ನು ಪಡೆಯಲು ಅರ್ಹತೆಯುಳ್ಳ ಶೇ॥ 8 ಭಾಗದ ಎಲ್ಲ ಕೆಲಸಗಾರರೂ ಈಗ ನಿರುದ್ಯೋಗಿಗಳಾಗಿದ್ದಾರೆ ಎಂದು ಕಾರ್ಮಿಕ ಇಲಾಖೆಯು ತಿಳಿಸಿದೆ. 1950ರ ಆರ್ಥಿಕ ಮುಗ್ಗಟ್ಟಿನ ಕಾಲಾವಧಿಯಲ್ಲಿ ಈ ಸಂಖ್ಯೆಯು ಶೇ. 7·9 ಆಗಿತ್ತು.

ಅಮೇರಿಕದಲ್ಲಿರುವ ಒಟ್ಟು 670 ಲಕ್ಷ ಕೆಲಸಗಾರರ ಪೈಕಿ 430 ಲಕ್ಷ ಕೆಲಸಗಾರರಿಗೆ ಈ ಸೌಲಭ್ಯಗಳನ್ನು ಪಡೆಯುವ ಅರ್ಹತೆ ಇದೆ.

ಅಮೇರಿಕದಲ್ಲಿ ಪ್ರಸ್ತುತದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ತೀವ್ರವಾಗಿ ಹೆಚ್ಚುತ್ತಿರುವುದಕ್ಕೆ ಕಾರಣ ಅಮೇರಿಕದ ಆ

(೯ನೇ ಪುಟ ನೋಡಿ)

ಭಾರತ ಕಮ್ಯೂನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಲಿಯ ಸೆಕ್ರೆಟೇರಿಯಟ್ ಸದಸ್ಯರು



ಎ. ಕೆ. ಗೋಪಾಲನ್



ಅಜಯಕುಮಾರ್ ಘೋಷ್
ಪ್ರಧಾನ ಕಾರ್ಯದರ್ಶಿ



ಎಸ್. ಎ. ಡಾಂಗೆ



ಪಿ. ಸಿ. ಜೋಷಿ



ಜೆಡ್. ಎ. ಅಹಮದ್



ಬಿ. ಟಿ. ರಣದಿವೆ



ಬಸವ ಪೊನ್ನಯ್ಯ

ರಾಷ್ಟ್ರೀಯ ಮಂಡಲಿಯ ಸದಸ್ಯರು

ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನೆಯಂತೆ ಏಪ್ರಿಲ್ 12 ರಂದು ಒಮ್ಮತವಾಗಿ ಚುನಾಯಿಸಲ್ಪಟ್ಟವರು

ಆಂಧ್ರ:– 1. ಪಿ ಸುಂದರಯ್ಯ. 2. ಸಿ. ರಾಜೇಶ್ವರರಾವ್. 3. ಎಂ. ಬಸವಪೊನ್ನಯ್ಯ. 4. ರವಿನಾರಾಯಣರೆಡ್ಡಿ. 5. ಮೊಕ್ದುಂ ಮೊಹಿದ್ದೀನ್. 6. ಟಿ. ನಾಗಿರೆಡ್ಡಿ. 7. ಎಂ. ಹನುಮಂತರಾವ್. 8. ಟಿ. ಸತ್ಯನಾರಾಯಣ. 9. ವೈ. ವಿ. ಕೃಷ್ಣರಾವ್. 10. ಎನ್. ರಾಜಶೇಖರರೆಡ್ಡಿ. 11. ಡಿ. ವೆಂಕಟೇಶ್ವರರಾವ್. 12. ಜಿ. ಬಿ. ಪಾನಯ್ಯ 13. ಕೆ. ಎಲ್. ನರಸಿಂಹನ್. 14. ಬಿ. ಯಲ್ಲಾರೆಡ್ಡಿ ಮತ್ತು 15. ಚಂದ್ರಶೇಖರರಾವ್.

ಅಸ್ಸಾಂ:– 16. ಫಣಿಬೋರ ಮತ್ತು 17. ಅಚಿಂತ್ಯ ಭಟ್ಟಾಚಾರ್ಯ.

ಬಿಹಾರ್:– 18. ಯೋಗೇಂದ್ರಶರ್ಮ. 19. ಇಂದ್ರದೀಪ್‌ಸಿನ್ಹ. 20. ಜಗನ್ನಾಥ್ ಸರ್ಕಾರ್. 21. ಅಲಿ ಅಷ್ರಫ್. 22. ಸುನೀಲ್ ಮುಖರ್ಜಿ. ಮತ್ತು 23. ಕಾರ್ಯಾನಂದ್‌ಶರ್ಮ.

ಗುಜರಾತ್:– 24. ದಿನಕರ್ ಮೆಹ್ತ. 25. ಚಿಮನ್ ಮೆಹ್ತ.

ಕೇರಳ:- 26. ಇ. ಎಂ. ಎಸ್. ನಂಬೂದ್ರಿಪಾದ್. 27. ಸಿ. ಅಚ್ಯುತ ಮೆನನ್. 28. ಎಂ. ಎನ್. ಗೋವಿಂದನಾಯರ್. 29. ಕೆ. ದಾಮೋದರನ್. 30. ಎಸ್. ಕುಮಾರನ್. 31. ಸಿ. ಉನ್ನಿರಾಜ. 32. ಪಿ. ಕೆ. ವಾಸುದೇವನ್ ನಾಯರ್. 33. ಕೆ. ಕೆ. ವಾರಿಯರ್. 34. ಶ್ರೀಮತಿ ರೋಸಮ್ಮ ಪೊನ್ನೂಸ್. 35. ಇ. ಕೆ. ಯಿಂಬಿಚ್ಚಿಬಾವ. 36. ಟಿ. ಸಿ ನಾರಾಯಣನ್ ನಂಬಿಯಾರ್. 37. ಕೆ. ಎ. ಕೇರಳೀಯನ್. 38. ಬಾಲಚಂದ್ರಮೆನನ್. 39. ಸಿ. ಎಚ್. ಕಣರನ್. 40. ಸಿ. ಜನಾರ್ಧನ್. ಮತ್ತು 41. ವಿ. ಎಸ್. ಅಚ್ಯುತಾನಂದನ್.

ಮಧ್ಯ ಪ್ರದೇಶ:- 42. ಎಲ್. ಆರ್. ಖಾಂಡ್ಕರ್. 43. ಬಿ. ಕೆ. ಗುಪ್ತ.

ಮಹಾರಾಷ್ಟ್ರ:– 44. ಎಸ್. ಜಿ. ಸರದೇಸಾಯ್. 45. ಸುಧಾಮ್ ದೇಶಮುಖ್. 46. ಬಿ. ಟಿ. ರಣದಿವೆ. 47. ಎಸ್. ಜಿ. ಪಾಟ್ಕರ್. 48. ಚಂದ್ರಗುಪ್ತ ಚೌಧುರಿ. 49. ಜಿ. ಅಧಿಕಾರಿ.

ಮಣಿಪುರ:– 50. ಥಾ. ಬೀರಸಿಂಗ್. 51. ಥೀನ್. ಮೇಘಚಂದ್ರ.

ಮೈಸೂರು: 52. ಎನ್. ಎಲ್. ಉಪಾಧ್ಯಾಯ 53. ಬಿ. ವಿ. ಕಕ್ಕಿಲ್ಲಾಯ.

ಒರಿಸ್ಸ:- 54. ಗೋಕುಲ್ ಮೋಹನ್‌ರಾಯ್ ಚೂಡಾಮಣಿ. 55. ರಾಮಕೃಷ್ಣಪಾಠಿ. 56. ಗುರುಚರಣ ಪಟ್ನಾಯಕ್.

ಪಂಜಾಬ್:- 57. ಸೋಹನ್‌ಸಿಂಗ್ ಜೋಷ್, 58. ಹರಿಕಿಷನ್‌ಚಂದ್ ಸೂರ್ಜಿತ್. 59. ಜಗಜಿತ್‌ಸಿಂಗ್ ಲಾಲ್‌ಪೂರಿ. 60. ಅವ್ತಾರ್‌ಸಿಂಗ್ ಮಲ್ಹೋತ್ರ. 61. ಮಾಸ್ತರ್ ಹರಿಸಿಂಗ್.

ರಾಜಾಸ್ಥಾನ್:– 62. ಎಚ್. ಕೆ. ವ್ಯಾಸ್. 63. ಮೋಹನ್ ಪುನಾಮಿಯ.

ತಮಿಳುನಾಡು:– 64. ಪಿ. ರಾಮಮೂರ್ತಿ. 65. ಎಂ. ಆರ್. ವೆಂಕಟರಾಮನ್. 66. ಎಂ. ಕಲ್ಯಾಣಸುಂದರಂ. 67. ಎನ್. ಶಂಕರಯ್ಯ. 68. ಪಿ. ಜೀವಾನಂದಂ. 69. ಬಿ. ಶ್ರೀನಿವಾಸರಾವ್. 70. ಕೆ. ರಮಣಿ.

ತ್ರಿಪುರ:- 71. ದಶರಥದೇಬ್. 72. ಬಿರೇನ್‌ದತ್.

ಉತ್ತರ ಪ್ರದೇಶ:– 73. ಕಾಳಿಶಂಕರ ಶುಕ್ಲ. 74. ಶಂಕರದಯಾಳ್ ತಿವಾರಿ. 75. ಎಸ್. ಎಸ್. ಯೂಸಫ್. 76 ಶಿವಕುಮಾರ್ ಮಿಶ್ರ. 77. ಜೈಬಹದ್ದೂರ್‌ಸಿಂಗ್.

ಪಶ್ಚಿಮ ಬಂಗಾಳ:– 78. ಜ್ಯೋತಿ ಬಸು 79. ರಾನೆನ್ ಸೇನ್. 80. ಮುಜಫರ್ ಅಹಮದ್. 81. ಭವಾನಿ ಸೇನ್ 82. ಜೋಲಿಕಾಲ್. 83. ಇಂದ್ರಜಿತ್ ಗುಪ್ತ. 84. ಹರಿಕೃಷ್ಣಕೋನಾರ್ 85. ಸೋಮನಾಥ್ ಲಹಿರಿ.

ದೆಹಲಿ:- 86. ವೈ. ಡಿ. ಶರ್ಮ. 87. ಎಂ. ಫರೂಕಿ.

ಕೇಂದ್ರ:- 88. ಅಜಯ ಘೋಷ್. 89 ಎಸ್. ಎ. ಡಾಂಗೆ. 90. ಭೂಪೇಶ ಗುಪ್ತ. 91. ಡಾ| ಜಡ್. ಎ. ಅಹಮದ್. 92. ರೊಮೇಶ್ ಚಂದ್ರ. 93. ಪ್ರಸಾದರಾವ್. 94. ಪಿ. ಸಿ. ಜೋಷಿ 95. ರೇಣು ಚಕ್ರವರ್ತಿ. 96. ಹಿರೆನ್ ಮುಖರ್ಜಿ. 97. ಪಾರ್ವತಿ ಕೃಷ್ಣನ್. 98. ಸಜ್ಜಾದ್ ಜಹೀರ್ 99. ಎಸ್. ವಿ. ಘಾಟೆ. 100. ಹಜ್ರಾಬೇಗಂ. 101. ಎ. ಕೆ. ಗೋಪಾಲನ್.

ನಮ್ಮ ಮೊದಲ ದಿನಗಳು

ಮುಜಫರ್ ಅಹಮದ್

[ಭಾರತ ಕಮ್ಯೂನಿಸ್ಟ್ ಪಾರ್ಟಿಯ ಸಂಸ್ಥಾಪಕರಲ್ಲೊಬ್ಬರಾದ ಕಾಂ॥ ಮುಜಫರ್ ಅಹಮದ್‌ರವರು ಈ ಲೇಖನದಲ್ಲಿ ತಮ್ಮ ಅನುಭವಗಳನ್ನು ಕುರಿತು ವಿವರಿಸಿದ್ದಾರೆ. "ನ್ಯೂ ಏಜ್" ಮಾಸ ಪತ್ರಿಕೆಯ ಪ್ರಸ್ತುತ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಲೇಖನವನ್ನು ಇಲ್ಲಿ ಕೊಡಲಾಗಿದೆ—ಸಂ]

———

1921ನೆಯ ವರ್ಷದಲ್ಲಿ ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯವು ಬ್ರಿಟಿಷ್ ಭಾರತದಲ್ಲಿ ತನ್ನ ಸಂಘಟನೆಯ ಶಾಖೆಯನ್ನು ಆರಂಭಿಸಲು ತೀರ್ಮಾನಿಸಿತು. ಅಪಾದಿತರಾಗಿರುವ ಶ್ರೀಪಾದ ಅಮೃತ್ ಡಾಂಗೆ, ಶೌಕತ್ ಉಸ್ಮಾನಿ ಮತ್ತು ಮುಜಫರ್ ಅಹಮದ್ ಇವರುಗಳು ಮತ್ತಿತರರೊಂದಿಗೆ ಸೇರಿಕೊಂಡು ಬ್ರಿಟಿಷ್ ಭಾರತದಲ್ಲಿ ಚಕ್ರವರ್ತಿ ಸಾರ್ವಭೌಮರ ಸಾರ್ವಭೌಮತ್ವವನ್ನು ಉರುಳಿಸಲು ಹಂಚಿಕೆಹೂಡಿ, ಪಿತೂರಿ ನಡೆಸಿ, ಮೇಲೆ ಹೇಳಲಾದ ಸಂಸ್ಥೆಯ ಶಾಖೆಗಳನ್ನು ತೆರೆಯುವುದರಲ್ಲಿ ಉದ್ಯುಕ್ತರಾಗಿದ್ದರು. (ಮಾರ್ಚ್ 15, 1929ರಲ್ಲಿ ಮೀರತ್ ಜಿಲ್ಲಾ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಭಾರತ ಸರಕಾರ ಗೃಹಸಚಿವಾಲಯದ ಗುಪ್ತ ಪೋಲೀಸ್ ಅಧಿಕಾರಿಯಿಂದ ನಿಯಮಿತರಾಗಿದ್ದ, ವಿಶೇಷ ಅಧಿಕಾರಿ ಮಿ॥ ಆರ್. ಎ. ಹಾರ್ಟನ್‌ರವರ ಫಿರ್ಯಾದಿನಿಂದ ಮೇಲಿನ ಅಂಶವನ್ನು ಉಲ್ಲೇಖಿಸಲಾಗಿದೆ)

"ನ್ಯೂ ಏಜ್" ಮಾಸಪತ್ರಿಕೆಯವರು ಭಾರತದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಹೇಗೆ ಬೆಳೆಯಿತು ಎನ್ನುವುದನ್ನು ಕುರಿತು ನನ್ನ ಅನುಭವಗಳನ್ನು ಬರೆಯಬೇಕೆಂದು ಕೇಳಿದ್ದಾರೆ. ಈ ಲೇಖನವೊಂದರಲ್ಲಿ ಇಡೀ ಕಾಲಘಟ್ಟದ ಅನುಭವಗಳನ್ನು ಬರೆಯುವುದು ಕಷ್ಟ. ಆದರೂ ನಾನು ಬರೆಯಲು ಇಚ್ಛಿಸುತ್ತೇನೆ. ಏಕೆಂದರೆ, ಈ ಹಿಂದೆ ನಾನು ಈ ಬಗ್ಗೆ ಏನನ್ನೂ ಬರೆದಿಲ್ಲ, ಆದರೆ ನಮ್ಮ ಪಾರ್ಟಿಯ ಸ್ಥಾಪನೆಯ ಇತಿಹಾಸವನ್ನು ಕುರಿತು ಅನೇಕರು ದೇಶದೊಳಗೂ ಮತ್ತು ಹೊರಗೂ ಬರೆಯುತ್ತಿದ್ದಾರೆ. ಅಂಥ ಲೇಖನಗಳು, ಕೆಲವೆಡೆಗಳಲ್ಲಿ ವಾಸ್ತವಾಂಶಗಳಿಂದ ದೂರವಾಗಿದೆ.

1917ರಲ್ಲಿ ರಷ್ಯದಲ್ಲಿ ಅಕ್ಟೋಬರ್ ಕ್ರಾಂತಿ ಸಂಭವಿಸಿತು. ಸಾಮ್ರಾಜ್ಯವಾದೀ ಜಗತ್ತು ಈ ಕ್ರಾಂತಿಯ ಬಗ್ಗೆ ಅಪಾರವಾಗಿ ಸುಳ್ಳಿನ ಪ್ರಚಾರ ನಡೆಸಿತು—ರಷ್ಯದಲ್ಲಿ ಸ್ತ್ರೀಯನ್ನು ರಾಷ್ಟ್ರೀಕರಣ ಮಾಡಲಾಗಿದೆ, ಮಕ್ಕಳನ್ನು ತಾಯಂದಿರಿಂದ ಕಸಿದುಕೊಳ್ಳಲಾಗಿದೆ, ಇತ್ಯಾದಿ ಪ್ರಚಾರ ನಡೆಸಿದರು. ಇಷ್ಟೆಲ್ಲ ಇದ್ದರೂ ಸಹ ನಮ್ಮ ದೇಶದಲ್ಲೂ ರಷ್ಯನ್ ಕ್ರಾಂತಿಯು ತನ್ನ ಪ್ರಭಾವವನ್ನು ಬೀರಿತು. ಬಂಗಾಳದಲ್ಲಿ ಭಯೋತ್ಪಾದಕ ಕ್ರಾಂತಿಕಾರೀ ಚಳವಳಿ ಮೊದಲ ಧಾಳಿಯಿಂದ ಹಿಂದೆ ಸರಿಯುತ್ತಿದ್ದರೂ, ಆ ವರ್ಷ ಇತರ ಚಳವಳಿಗಳು ಪ್ರಬಲವಾಗಿ ಉದ್ಭವಿಸಿದುವು. ಈ ಸಂದರ್ಭದಲ್ಲಿ ಕಿಲಾಫತ್ ಚಳವಳಿ ಮತ್ತು ರಾಜಕೀಯ ಕೈದಿಗಳ ಬಿಡುಗಡೆಗಾಗಿ ಚಳವಳಿ ಇವನ್ನು ಉಲ್ಲೇಖಿಸಬಹುದು. ಅನೇಕ ದೊಡ್ಡ ಸಭೆಗಳೂ ಮತ್ತು ಪ್ರದರ್ಶನಗಳು ನಡೆದುವು. ಕಲ್ಕತ್ತಾದಲ್ಲಿ ನಾನು ಎಲ್ಲ ಸಭೆಗಳಲ್ಲೂ ಮತ್ತು ಪ್ರದರ್ಶನಗಳಲ್ಲೂ ಭಾಗವಹಿಸುತ್ತಿದ್ದೆ. 1918ರಿಂದ ಅನೇಕ ಕಡೆಗಳಲ್ಲಿ ಕಾರ್ಮಿಕರ ಮುಷ್ಕರಗಳು ಆರಂಭವಾದುವು. 1919ರಲ್ಲಿ ಜಲಿಯನ್‌ವಾಲ ಭಾಗ್ ಕಗ್ಗೊಲೆ ನಡೆಯಿತು. ಇದರ ಬಗ್ಗೆ ದೇಶಾದ್ಯಂತ ಬಹು ದೊಡ್ಡ ಪ್ರಕ್ಷೋಭೆ ನಡೆಯಿತು. 1919ರಲ್ಲಿ ಸುಧಾರಣಾ ಕಾಯಿದೆ ಅನುಮೋದನೆಯಾಯಿತು. ಈ ಕಾಯಿದೆಯ ವಿರುದ್ಧವೂ ಪ್ರಬಲವಾದ ಪ್ರತಿಭಟನೆ ನಡೆಯಿತು.

ಕಾರ್ಯಾರಂಭ

1920ರಲ್ಲಿ ರಾಜಕೀಯವನ್ನು ನನ್ನ ಜೀವನ ಉದ್ಯೋಗವಾಗಿ ಮಾಡಿಕೊಳ್ಳಲು ತೀರ್ಮಾನಿಸಿದೆ. ಅದಕ್ಕೆ ಮುಂಚೆ ನಾನು ಸಾಹಿತ್ಯ ಸಂಘವೊಂದರ ಪೂರ್ಣಕಾಲ ದುಡಿಯುವ ಸದಸ್ಯನಾಗಿದ್ದೆ. ಈ ಸಂಘದ ಮೂಲಕ 49ನೇ ಬಂಗಾಳ ರೆಜಿಮೆಂಟಿನ ಹವಾಲ್ದಾರರಾಗಿದ್ದ ಕಾಜಿ ನಜ್ರುಲ್ ಇಸ್ಲಾಂರವರ ಪರಿಚಯ ನನಗೆ ಆಯಿತು. ನಂತರ ಅವರು ರಾಷ್ಟ್ರಾದ್ಯಂತ ಖ್ಯಾತಿ ಪಡೆದ ಕವಿಯಾದರು. ಬಂಗಾಳ ರೆಜಿಮೆಂಟ್ ವಿಸರ್ಜನೆಯಾದನಂತರ ಅವರು ಕಲ್ಕತ್ತಾದಲ್ಲಿ ನನ್ನೊಂದಿಗೆ ಉಳಿದುಕೊಂಡರು. ಶ್ರೀ ಎ. ಕೆ. ಫಜ್ಲುಲ್ ಹಕ್ (ಈಗ ಪೂರ್ವ ಪಾಕಿಸ್ತಾನದ ರಾಜ್ಯಪಾಲರು) ಎಡಪಕ್ಷದ ನಾಯಕರೆಂದೆನಿಸಿಕೊಂಡಿದ್ದರು. ಬಂಗಾಳಿ ಭಾಷೆಯಲ್ಲಿ ಪತ್ರಿಕೆಯೊಂದನ್ನು ಹೊರಡಿಸಲು ಅವರು ತೀರ್ಮಾನಿಸಿದರು. ನಜ್ರುಲ್ ಇಸ್ಲಾಂ ಮತ್ತು ನಾನು ಅದರ ಹೊಣೆ ಹೊತ್ತೆವು. **'ನವಯುಗ'** ಸಂಜೆಯ ದಿನ ಪತ್ರಿಕೆಯು ನಮ್ಮ ಜಂಟಿ ಸಂಪಾದಕತ್ವದಲ್ಲಿ ಪ್ರಕಟವಾಯಿತು. ನಜ್ರುಲ್ ಇಸ್ಲಾಂರವರ ತೀಕ್ಷ್ಣವಾದ ಭಾಷೆಯಿಂದಾಗಿ ಪತ್ರಿಕೆಯು ಮೊದಲ ದಿನದಿಂದಲೇ ಜನಪ್ರಿಯತೆಯನ್ನು ಗಳಿಸಿತು. ಸಾಮಾನ್ಯವಾಗಿ ಎಲ್ಲ ಸಂಪಾದಕೀಯಗಳನ್ನೂ ನಾನೇ ಬರೆಯುತ್ತಿದ್ದೆ.

'ನವಯುಗ' ಇತರ ಬಂಗಾಳಿ ದಿನಪತ್ರಿಕೆಗಳಿಂದ ಬೇರೆಯಾಗಿತ್ತು. ಅದರಲ್ಲಿ ಕಾರ್ಮಿಕರು ಮತ್ತು ರೈತರ ಬಗ್ಗೆ ಹೆಚ್ಚು ಇರುತ್ತಿತ್ತು. ಇದಕ್ಕೆ ಅಡ್ಡಿ ಬರುವುದರ ಬದಲು ಶ್ರೀ ಫಜ್ಲುಲ್ ಹಕ್ ಉತ್ತೇಜನ ಕೊಡುತ್ತಿದ್ದರು. ನನ್ನ ಗೆಳೆಯರೊಬ್ಬರು ಈ ರೀತಿ ಹೇಳಿದರು: "ಬಂಗಾಳಿ ಪತ್ರಿಕೆಗಳು ತುಂಬ ಭಾವನಾ ಪೂರ್ಣವಾದುವಾಗಿವೆ. ನೀವು ಸ್ವಲ್ಪ ಸ್ಥಳವನ್ನು ಸಾಮಾನ್ಯ ಜನರ ಬರಹಗಳಿಗೆ, ಅದರಲ್ಲೂ ಮುಖ್ಯವಾಗಿ ಕಾರ್ಮಿಕರ ಮತ್ತು ರೈತರ ಬರಹಗಳಿಗೆ ಮೀಸಲಾಗಿರಿಸಿರಿ. ನಾನು ಇದನ್ನು ಸಂಪೂರ್ಣವಾಗಿ ಒಪ್ಪಿದೆ. ಇದಕ್ಕೆ ಹಿಂದೆಯೇ ನಾನು ಸಮುದ್ರದಲ್ಲಿ ಸಂಚರಿಸುವ ಹಡಗುಗಳ ನಾವಿಕರೊಂದಿಗೆ ಮತ್ತು ಬಂಗಾಳದ ನದಿಯಲ್ಲಿ ಸಂಚರಿಸುತ್ತಿದ್ದ ದೋಣಿಗಳ ಕೆಲಸಗಾರರ ನಡುವೆ ಸಂಪರ್ಕವಿರಿಸಿಕೊಂಡಿದ್ದೆ. ನನ್ನ ಹುಟ್ಟೂರಿನ ಜನರು (ನಾನು ಬಂಗಾಳ ಕೊಲ್ಲಿಯ ಸಾಂಡ್ವಿಪ್ ಎಂಬ ದ್ವೀಪದಲ್ಲಿ ಜನಿಸಿದ್ದು) ನಾವಿಕರಾಗಿದ್ದರು ಮತ್ತು ಈಗಲು ಅನೇಕರು ನಾವಿಕರೇ ಆಗಿದ್ದಾರೆ. ಇತರರನ್ನು ಕುರಿತು ಬರೆಯುತ್ತಿದ್ದುದಷ್ಟೇ ಅಲ್ಲದೆ ನಾನು **'ನವಯುಗ'** ನಲ್ಲಿ ನಾವಿಕರ ಸಮಸ್ಯೆಗಳ ಬಗ್ಗೆ ವಿಶೇಷವಾಗಿ ಬರೆಯುತ್ತಿದ್ದೆ. ಪತ್ರಿಕೆಯಲ್ಲಿ ಹೀಗೆ ಬರೆಯುವುದರ ಮೂಲಕ ಮೂರನೆಯ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಕಡೆಗೆ ನಾನು ಸೆಳೆಯಲ್ಪಡುತ್ತೇನೆ ಎಂಬುದರ ಬಗ್ಗೆ ನನಗೆ ಸ್ವಲ್ಪವೂ ಅರಿವಿರಲಿಲ್ಲ.

ಪಾರ್ಟಿಯ ಸ್ಥಾಪನೆ

1920ರಲ್ಲಿ ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯದ ದ್ವಿತೀಯ ಅಧಿವೇಶನವು ಲೆನಿನ್ನರ ವಸಾಹತು ಪ್ರಸ್ತಾವನೆಯನ್ನು ಅಂಗೀಕರಿಸಿತು (ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯವು 1919ರಲ್ಲಿ ಸ್ಥಾಪನೆಯಾಯಿತು.) ಇದಾದ ನಂತರ ವಸಾಹತು ರಾಷ್ಟ್ರಗಳಲ್ಲಿ ಸಂಪರ್ಕವನ್ನು ಸ್ಥಾಪಿಸಲು ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯವು ಯತ್ನಿಸಿತು. ರಷ್ಯದ ಕ್ರಾಂತಿಯ ನಂತರದಲ್ಲೇ ಭಾರತ ಸರಕಾರವು ಬಹಳ ಎಚ್ಚರಿಕೆ ವಹಿಸಿದ್ದಿತು. ಈ ದೇಶದಲ್ಲಿಯೂ ಏನಾದರೂ ಆಗಬಹುದೆಂದು ಕೊನೆಯ ಪಕ್ಷ ಕಮ್ಯೂನಿಸ್ಟ್ ಪಾರ್ಟಿಯಾದರೂ ಸ್ಥಾಪಿತವಾಗಬಹುದೆಂದು ಅವರು ಯೋಚಿಸಿದ್ದರು. ಅದರಿಂದಾಗಿಯೇ ಅವರು ಹೊಸ ಗುಪ್ತ ಪೋಲೀಸ್ ಕೇಂದ್ರವೊಂದನ್ನು ಸ್ಥಾಪಿಸಿದರು. ವಿವಿಧ ಪ್ರಾಂತಗಳಲ್ಲಿ ರಾಜಕೀಯ ಕಾರ್ಯಕರ್ತರ ಮೇಲೆ ಕಣ್ಣಿರಿಸಿಕೊಂಡಿರುತ್ತಿದ್ದ ಪ್ರಾಂತೀಯ ಗುಪ್ತ ಪೋಲೀಸರಲ್ಲದೆ, ಅದರೊಂದಿಗೆ ಕೇಂದ್ರ ಗುಪ್ತ ಪೋಲೀಸರು ಬೇರೆ ದೇಶಾದ್ಯಂತ ಹರಡಿಕೊಂಡಿದ್ದರು, ಇವರನ್ನು ಹೊರ ದೇಶಗಳಲ್ಲಿಯೂ ಕೆಲಸ ಮಾಡಲು ಕಳಿಸಲಾಗಿತ್ತು. ಇಂಥ ಸನ್ನಿವೇಶದಲ್ಲಿ ನಾವು ಕೆಲವರು ಭಾರತದ ನಾನಾ ಭಾಗಗಳಲ್ಲಿ ಈ ಸಾಹಸ ಕಾರ್ಯವನ್ನು ಸಾಧಿಸಲು ಉದ್ಯುಕ್ತರಾದೆವು. ನಮ್ಮ ಗುರಿಯು ಭಾರತ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವುದಾಗಿತ್ತು. ನಾವೆಲ್ಲರೂ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದಿಂದ ಸ್ಫೂರ್ತಿ ಪಡೆದಿದ್ದವೆಂದು ನಾನು ಒತ್ತಿ ಹೇಳಬಯಸುತ್ತೇನೆ.

ನಮ್ಮ ಕೆಲಸವು ಕಲ್ಕತ್ತ, ಮುಂಬಯಿ ಮತ್ತು ಲಾಹೋರ್‌ಗಳಲ್ಲಿ ಆರಂಭವಾಯಿತು. ಫ್ರಾನ್ಸ್‌ನಲ್ಲಿ ಮತ್ತು 1921ರಲ್ಲಿ ಚೀಣದಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನು ಸ್ಥಾಪಿಸುವ ಕಾರ್ಯದಲ್ಲಿ ಮುಂದೆ ಬಂದವರ ಸಂಖ್ಯೆಗೆ ಹೋಲಿಸಿದಲ್ಲಿ ನಾವು ಬಹಳ ಕಡಿಮೆ ಸಂಖ್ಯೆಯಲ್ಲಿದ್ದೆವು. ನನ್ನ ಮಟ್ಟಿಗೆ ಈ ನ್ಯೂನತೆ ಚೆನ್ನಾಗಿ ಅರಿವಾಗಿತ್ತು. ಮಾರ್ಕ್ಸ್‌ವಾದದ ಬಗ್ಗೆ ನನ್ನ ತಿಳುವಳಿಕೆ ತೀರ ಕಡಿಮೆಯಾಗಿತ್ತು. ನಾನು ಈ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿದಾಗ, ನನಗಿದ್ದ ಭರವಸೆಯೆಂದರೆ ಜನತೆಯಲ್ಲಿದ್ದ ನಂಬಿಕೆ ಮತ್ತು ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ನಿರ್ದೇಶಗಳಿಗೆ ನಿಷ್ಠಾವಂತನಾಗಿರುವುದು ಅಷ್ಟೆ. ನನ್ನಲ್ಲಿ ಹಣವಾಗಲೀ ಜೀವನ ಸಾಗಿಸಲು ಸಾಧನವಾಗಲೀ ಇರಲಿಲ್ಲ. ನನ್ನ ಮಾನಸಿಕ ಶಕ್ತಿಯೊಂದೇ ಆಧಾರವಾಗಿದ್ದುದು. ಮೂವತ್ತೇಳು ವರ್ಷಗಳ ನಂತರ ಇಂದು ನನಗೆ ಆ ಮಾನಸಿಕ ಶಕ್ತಿ ಇಲ್ಲದಿದ್ದಲ್ಲಿ ನನ್ನ ಗತಿ ಏನಾಗುತ್ತಿತ್ತೆಂದು ಯೋಚಿಸುತ್ತಿದ್ದೇನೆ.

ಕಲ್ಕತ್ತಾದಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನು ಸ್ಥಾಪಿಸುವ ಯೋಜನೆಯಲ್ಲಿ ಕವಿ ನಜ್ರುಲ್ ಇಸ್ಲಾಂರವರೂ ಸಹ ಇದ್ದರು. ಆದರೆ ಅವರು ಕಮ್ಯೂನಿಸ್ಟ್ ಪಾರ್ಟಿಯನ್ನು ಸೇರಲಿಲ್ಲ. ಅವರು ಯಾವಾಗಲೂ ನಮ್ಮ ಬೆಂಬಲಿಗರಾಗಿದ್ದರು. ಸ್ವಲ್ಪ ಕಾಲದ ನಂತರ ಸ್ಥಾಪಿತವಾದ ಲೇಬರ್ ಸ್ವರಾಜ್ ಪಾರ್ಟಿಯ ಸಂಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು. ಕೆಲವು ಭಯೋತ್ಪಾದಕ ಕ್ರಾಂತಿಕಾರಿಗಳು ನಾನು ನನ್ನ ಕೆಲಸವನ್ನು ಮುಂದುವರಿಸಬೇಕೆಂದು ಅವರ ಬೆಂಬಲ ಸದಾ ಇರುವುದಾಗಿಯೂ ನನಗೆ ತಿಳಿಸಿದರು. ಆದರೆ ನಂತರ, ಅವರು ಯಾರೂ ಹತ್ತಿರ ಬರಲಿಲ್ಲ. 1922ರಲ್ಲಿ ನನ್ನ ಕೆಲಸದಲ್ಲಿ ಕಾಂ॥ ಅಬ್ದುಲ್ ರಜಾಕ್‌ಖಾನ್ (ಈಗ ರಾಜ್ಯ ಸಭೆಯ ಸದಸ್ಯರು) ರವರು ಸೇರಿಕೊಂಡರು ಮತ್ತು ನಂತರ ಕಾಂ॥ ಅಬ್ದುಲ್ ಹಲೀಮ್ (ಈಗ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕಂಟ್ರೋಲ್ ಕಮಿಶನ್ನಿನ ಸದಸ್ಯರು) ನಮ್ಮೊಡನೆ ಸೇರಿದರು. ಅಸಹಕಾರ ಚಳವಳಿಯ ಕಾಲದಲ್ಲಿ ಕಾಂ॥ ಖಾನ್‌ರವರು ಒಂದು ಬಾರಿಯೂ, ಕಾಂ॥ ಅಬ್ದುಲ್ ಹಲೀಮ್‌ರವರು ಮೂರು ಬಾರಿಯೂ ಜೈಲು ವಾಸ ಅನುಭವಿಸಿದ್ದರು. 1922ರಲ್ಲಿ ನಮಗೆ ಇನ್ನೂ ಒಬ್ಬರು ಗೆಳೆಯರು ದೊರೆತರು. ಅವರ ಹೆಸರು ಕುತುಬುದ್ದೀನ್ ಅಹಮದ್. 'ಅಲ್—ಹಿಲಾಲ್' ಮತ್ತು 'ಅಲ್—ಬಿಲಾಕ್' ಪತ್ರಿಕೆಗಳನ್ನು ನಡೆಸುವುದರಲ್ಲಿ ಅವರು ಒಂದು ಕಾಲದಲ್ಲಿ ಮೌಲಾನ ಅಬುಲ್ ಕಲಾಂ ಅಜಾದರ ಸಹೋದ್ಯೋಗಿಯಾಗಿದ್ದರು. ಆ ಕಾಲದಲ್ಲಿ ಕಲ್ಕತ್ತಾದಲ್ಲಿ ಮಾರ್ಕ್ಸ್‌ವಾದೀ ಸಾಹಿತ್ಯ ದೊರಕುವುದು ದುಸ್ತರವಾಗಿತ್ತು ಮತ್ತು ಸಿಕ್ಕುವಂತಿದ್ದರೂ ಸಹ ಕೊಳ್ಳಲು ನಮ್ಮಲ್ಲಿ ಹಣವಿರಲಿಲ್ಲ. ಜನಾಬ್ ಕುತುಬುದ್ದೀನ್ ಬಹಳ ಪುಸ್ತಕಗಳನ್ನು ಕೊಳ್ಳುತ್ತಿದ್ದರು ಮತ್ತು ಓದುತ್ತಿದ್ದರು. ಅವರಿಂದ ನಾನು ಫಿಲಿಪ್ಸ್ ಪ್ರೈಸ್‌ರವರಿಂದ ಬರೆಯಲ್ಪಟ್ಟ **"ರಷ್ಯನ್ ಕ್ರಾಂತಿಯ ಬಗ್ಗೆ ನನ್ನ ನೆನಪುಗಳು"** ಎಂಬ ಪುಸ್ತಕವನ್ನು ಓದಿದೆ. ರಷ್ಯನ್ ಕ್ರಾಂತಿಯ ಬಗ್ಗೆ ನಾನು ಓದಿದ ಮೊದಲ ಪುಸ್ತಕ ಇದು. 18 ಷಿಲ್ಲಿಂಗ್ ಬೆಲೆ ಇದ್ದ ಈ ಪುಸ್ತಕವನ್ನು ಕೊಳ್ಳುವುದು ನಮ್ಮಿಂದ ಆಗುತ್ತಲೇ ಇರಲಿಲ್ಲ. ಅವರ ಮನೆಯಲ್ಲಿ ನಮಗೆ ಯಾವಾಗಲೂ ಸ್ವಾಗತವಿತ್ತು. ನಂತರ ಅವರೂ ಸಹ ಲೇಬರ್ ಸ್ವರಾಜ್ ಪಾರ್ಟಿಯ ಸಂಸ್ಥಾಪಕರಲ್ಲೊಬ್ಬರಾದರು. ದ್ವಿತೀಯ ಮಹಾ ಯುದ್ಧ ಕಾಲದಲ್ಲಿ ಅವರು ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದರು. ಫೆಬ್ರುವರಿ 1, 1948ರಂದು ಅವರು ನಿಧನರಾದರು. ಆ ಕಾಲದಲ್ಲಿ ಇನ್ನೂ ಕೆಲವರು ನಮ್ಮೊಂದಿಗೆ ಸೇರಿಕೊಂಡರು. ಪ್ರತಿಯೊಬ್ಬರ ವಿಷಯವಾಗಿಯೂ ನಾನು ಬರೆಯುತ್ತಾ ಹೋದರೆ ಈ ಲೇಖನ ಬಹಳ ಉದ್ದವಾಗುತ್ತದೆ.

ಮುಂಬಯಿಯ ವಿಷಯ ಹೇಳಬೇಕಾದರೆ, ಶ್ರೀಪಾದ ಅಮೃತ್ ಡಾಂಗೆಯವರ ಹೆಸರನ್ನು ಮೊದಲು ಹೇಳಬೇಕಾಗಿದೆ. ಅವರು ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೇ ವಿದ್ಯಾರ್ಥಿಗಳ ಚಳವಳಿಯಲ್ಲಿ ಭಾಗವಹಿಸಿದ್ದರಿಂದಾಗಿ ಕಾಲೇಜಿನಿಂದ ಹೊರಹಾಕಲ್ಪಟ್ಟರು. ಅಸಹಕಾರ ಚಳವಳಿಯಲ್ಲಿಯೂ ಸಹ ಅವರು ಸೇರಿದ್ದರು. ಆದರೆ ಗಾಂಧಿವಾದ ಅವರಿಗೆ ಸರಿಬೀಳದ್ದರಿಂದ "ಗಾಂಧಿ ಮತ್ತು ಲೆನಿನ್" ಎನ್ನುವ ಪುಸ್ತಕವನ್ನು 1921ರಲ್ಲೇ ಇಂಗ್ಲಿಷಿನಲ್ಲಿ ಬರೆದರು. ಆ ಕಾಲಕ್ಕೆ ಇದು ಸಾಹಸದ ಕಾರ್ಯವಾಗಿತ್ತು. 1922ರಲ್ಲಿ ಅವರು 'ಸೋಷಿಯಲಿಸ್ಟ್' ಎನ್ನುವ ಹೆಸರಿನ ಆಂಗ್ಲಾಭಾಷಾ ವಾರ ಪತ್ರಿಕೆಯನ್ನು ತಂದರು. ನಮ್ಮ ದೇಶದಲ್ಲಿ ಅದಕ್ಕೆ ಹಿಂದೆ ಎಂದೂ ಅಂಥ ಹೆಸರಿನ ಪತ್ರಿಕೆ ಪ್ರಕಟವಾಗಿರಲಿಲ್ಲ. ನನಗಿಂತ ಹೆಚ್ಚಾಗಿ ಡಾಂಗೆಯವರಿಗೆ ಕಾರ್ಮಿಕರ ಸಂಪರ್ಕವಿತ್ತು. ಮುಂಬಯಿಯಲ್ಲಿ ಇತರರ ಬಗ್ಗೆ ಮುಂದೆ ತಿಳಿಸುತ್ತೇನೆ.

ಲಾಹೋರಿನಲ್ಲಿ ಗುಲಾಂ ಹುಸೇನ್‌ರವರು ಕೆಲಸ ಮಾಡುತ್ತಿದ್ದರು. ಇದಕ್ಕೆ ಹಿಂದೆ ಅವರು ಸರಕಾರಿ ಕಾಲೇಜಿನಲ್ಲಿ (ಪೆಷಾವರಿನಲ್ಲಿದ್ದ ಇಸ್ಲಾಮಿಯಾ-ಕಾಲೇಜ್) ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದರು. ಅವರು ಮಹಮ್ಮದ್ ಅಲಿಯವರ ಗೆಳೆಯರಾಗಿದ್ದರು. ಒಂದಾನೊಂದು ಕಾಲದಲ್ಲಿ, ಲಾಹೋರಿನ ಕೆಲವು ವಿದ್ಯಾರ್ಥಿಗಳು ಕ್ರಾಂತಿಕಾರಿ ಕಾರ್ಯದಲ್ಲಿ ತರಬೇತಿ ಹೊಂದಲು ಭಾರತದಿಂದ ಹೊರಗೆ ಹೋಗಿದ್ದರು. ರಷ್ಯನ್ ಕ್ರಾಂತಿಯ ನಂತರ ಅವರು ರಷ್ಯಕ್ಕೆ ಹೋಗಿದ್ದರು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಸೇರಿದರು. ಗುಲಾಂ ಹುಸೇನ್‌ರವರನ್ನು ಕಾಬೂಲಿಗೆ ಕರೆಸಿಕೊಂಡು ಮಾರ್ಕ್ಸ್‌ವಾದದ ಬಗ್ಗೆ ಅವರಲ್ಲಿ ವಿಶ್ವಾಸ ಮೂಡಿಸಿದವರು ಅವರೇ. ಅನಂತರ ಗುಲಾಂ ಹುಸೇನ್‌ರವರು ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವುದಕ್ಕಾಗಿ ತಮ್ಮ ಉದ್ಯೋಗವನ್ನು ಬಿಟ್ಟು ಲಾಹೋರಿಗೆ ಬಂದರು. ಅಲ್ಲಿಂದ ಅವರು ಉರ್ದು ಭಾಷೆಯಲ್ಲಿ **"ಇಂಕ್ವಿಲಾಬ್"** ಎನ್ನುವ ಮಾಸ ಪತ್ರಿಕೆ ಹೊರಡಿಸಲಾರಂಭಿಸಿದರು. ಅವರು, ಆಗ ಪ್ರಖ್ಯಾತವಾಗಿದ್ದ ನಾರ್ತ್ ವೆಸ್ಟರ್ನ್ ರೈಲ್ವೆ ಕೆಲಸಗಾರರ ಸಂಘದ ಕಾರ್ಯದರ್ಶಿಯೂ ಆದರು. ಡಾಂಗೆಯವರೊಂದಿಗೆ ನನ್ನ ಸಂಪರ್ಕ ಪತ್ರವ್ಯವಹಾರದ ಮೂಲಕ ಮಾತ್ರವಾಗಿತ್ತು. 1924ರಲ್ಲಿ ಕಾನ್ಪುರ ಜೈಲಿನಲ್ಲಿ ನಾನು ಅವರನ್ನು ಪ್ರಥಮ ಬಾರಿಗೆ ಭೇಟಿಮಾಡಿದೆ. ಆದರೆ ಗುಲಾಂ ಹುಸೇನ್‌ರವರನ್ನು ನಾನು ಎಂದೂ ಭೇಟಿಮಾಡಲಿಲ್ಲ, ಅಷ್ಟೇ ಅಲ್ಲ ಪತ್ರವ್ಯವಹಾರದ ಮೂಲಕವೂ ಅವರೊಂದಿಗೆ ಸಂಪರ್ಕವಿರಲಿಲ್ಲ.

1922ರಲ್ಲಿ ಮದರಾಸಿನ ವೃದ್ಧ ವಕೀಲರಾದ ಮಲಯಾಪುರಂ ಸಿಂಗಾರವೇಲುರವರು ತಾವು ಕಮ್ಯೂನಿಸ್ಟ್ ಎಂದು ಘೋಷಿಸಿದರು. ಅವರ ಮಾರ್ಕ್ಸ್‌ವಾದೀ ಪುಸ್ತಕ ಭಂಡಾರವು ಅಸೂಯೆ ಹುಟ್ಟಿಸುವಂಥದ್ದಾಗಿತ್ತು. ಅವರು ಕಾರ್ಮಿಕ ಹೋರಾಟಗಳಲ್ಲಿ ಕಾರಾಗೃಹವಾಸ

ಪರದೇಶ[...]
ಸಂಗಾತಿಗ[...]

ಭಾರತ ಕ[...]
ದೇಶಗಳಲ್ಲಿಯೂ[...]
ಹೇಳಬೇಕಾಗಿದೆ[...]
ರ್ಥ್ ಮತ್ತು ಪಂ[...]
ಪ್ರಬಲವಾದ ಹಿ[...]
ರಂಭವಾಯಿತು.[...]
ರ್ಥ ದಬ್ಬಾಳಿಕೆಯ[...]
ಶ ಮತ್ತು ಮಿ[...]
ಮಾಡುವುದು.
ವಾಗಿ ಸುಮಾರು[...]
ದಿ ಮುಸಲ್ಮಾನರ[...]
ಘ್ಘಾನಿಸ್ತಾನಕ್ಕೆ ಹ[...]
ನಿಸ್ತಾನ್ ಸರಕಾ[...]
ದೇಶಕ್ಕೆ ಬರಲು[...]
ಅಫ್ಘಾನಿಸ್ತಾನವು[...]
ದುಳಿದ ದೇಶಾವ[...]
ಮುಹಾಜಿರ್[...]
ಸೇರಿ ಕೊಂಡಿದ್ದ[...]
ವು ಟರ್ಕಿಗೆ ಹೊ[...]
ಯ ಪರವಾಗಿ[...]
ದಾಗಿ ಒತ್ತಾಯ[...]
ನೆಯಲ್ಲಿ ಅಫ್ಘಾನ್[...]
ನ್ನು ಕೊಡಲೇ ಬೇ[...]

ಹಿಂದೂಕುಶ್[...]
ಯುವಕರು ಅಮಿ[...]
ಸರಹದ್ದಿನಲ್ಲಿದೆ)[...]
ಅಮುದಾರ್ಯವನ್ನು[...]
ದಾಟುತ್ತಿದ್ದಾಗ,[...]
ದ ಕೆಲವು ಜನರು[...]
ದರು. ಈ ಜನ[...]
ನ್ನೂ ಮತ್ತು ಅಂ[...]
ದ್ದರು. ಕೆಂಪು ಸೆ[...]
ಈ ಯುವಕರ ಜಿ[...]
ಮುಸ್ಲಿಮರಾಗಿದ್ದ[...]
ರ್ಕ್‌ಮೆನ್ ಮುಸ[...]
ದ್ದುದು ಇವರಲ್ಲಿ ಭ[...]
ಟುಮಾಡಿತು.[...]
ಸೇನೆಯೊಂದಿಗೆ ಕಿ[...]
ವಿರುದ್ಧ ಹೋರಾ[...]
ಯುವಜನರು ತಾ[...]
ಯನ್ನು ಸೇರಿಕೊಂ[...]
ಚ್ಛಲ್ಪಟ್ಟನಂತರ[...]
ಸದಾಗಿ ಸ್ಥಾಪಿತವಾ[...]
ರ್ಸಿಟಿ (ಪೂರ್ವ[...]
ಸೇರಿದರು. ಅಲ್ಲಿ[...]
ದ ನಂತರ ಮಾರ್ಕ[...]
ಮ್ಮ ಸಿದ್ಧಾಂತವಾ[...]
ಕಮ್ಯೂನಿಸ್ಟ್ ಪಾ[...]
ಆದಾದ ನಂತರ ಈ[...]
ರುವ ವರೆಗೂ ಭಾ[...]
ಯು ಅಲ್ಲಿ ಕೆಲಸ[...]
ನಮ್ಮ ಕಾಮ್ರೇಡ್[...]
ದು ಕಾಲದಲ್ಲಿ ಅ[...]
ಯಾಗಿದ್ದರು. ಈ[...]
ಲ್ಲಿ ಒಂಭತ್ತು ತಿಂ[...]
ತರ ಭಾರತೀಯ[...]
ಹಿಂತಿರುಗಿ ಅಲ್ಲಿ[...]
ದರು. ಅವರಲ್ಲಿ[...]
ಭಾರತಕ್ಕೆ ಹಿಂದಿ[...]
ದರು. ಆದರೆ ಇ[...]
ಸರಿಯಾದ ಮಾ[...]
ಅವರು ಪಾಮಿರ್[...]
ತಿರುಗಲು ಯೋ[...]
ನಿಸ್ಟ್ ಅಂತರ ರಾ[...]
ಲ್ಲದೆ ಪಾಮಿರ್ಸ್[...]
ಲು ಒಬ್ಬ ಮಾಗ[...]
ಯಿತು. ಅಲ್ಲಿಂ[...]
ದ್ದಿನಲ್ಲಿಯೇ ಇದ್ದ[...]
ಅಲ್ಲಿಯೇ ಅವರ[...]
ಬಂಧಿಸಿದರು.

ಖೈದಿಗಳಾಗಿದ್ದರು. 1923ರಲ್ಲಿ ಅವರ ಮೇಲೆ ಶಿಕ್ಷೆ ವಿಧಿಸಲಾಯಿತು. ಅವರಲ್ಲಿ ಕೆಲವರನ್ನು ಒಂದು ವರ್ಷ ಕಠಿಣ ಶಿಕ್ಷೆಗೆ, ಇಬ್ಬರನ್ನು ಎರಡು ವರ್ಷ ಕಠಿಣ ಶಿಕ್ಷೆಗೆ ಮತ್ತು ಒಬ್ಬರನ್ನು ಹತ್ತು ವರ್ಷ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. **ಪೆಷಾವರ ಒಳಸಂಚಿನ ಮೊಕದ್ದಮೆಯು ನಿಜವಾಗಿಯೂ ಭಾರತದಲ್ಲಿ ಪ್ರಥಮ ಕಮ್ಯೂನಿಸ್ಟ್ ಒಳಸಂಚು ಮೊಕದ್ದಮೆಯಾಗಿತ್ತು.** ಹಾಗಿದ್ದರೂ, ಅದರ ಸುದ್ದಿಯು ಅಟೋಕ್ ನದಿಯ ಈಚೆ ದಡವನ್ನು ಮುಟ್ಟಲೇ ಇಲ್ಲ. ವಾಯುವ್ಯ ಗಡಿಪ್ರಾಂತದ ಪರಿಸ್ಥಿತಿಯು ಅಂಥದಾಗಿತ್ತು. ಪೆಷಾವರ್ ಮೊಕದ್ದಮೆಯಲ್ಲಿ ಖೈದಿಗಳಾಗಿದ್ದವರಲ್ಲಿ ನಂತರ ಪಾರ್ಟಿಯ ಸಕ್ರಿಯ ಕಾರ್ಯಕರ್ತರಾದವರೆಂದರೆ, ಮೀರ್ ಅಬ್ದುಲ್ ಮಜೀದ್, ಫಿರೋಜುದ್ದಿನ್ ಮನ್ಸೂರ್ ಮತ್ತು ಗೃಹರ್ ರಹಾನ್ ಖಾನ್ ಇವರುಗಳು.

ಭಾರತದ ವಿವಿಧ ಭಾಗಗಳಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿಯನ್ನು ಸ್ಥಾಪಿಸುವ ಪ್ರಯತ್ನಗಳು ಹೇಗೆ ಆರಂಭವಾಗಿತ್ತೆಂಬುದನ್ನು ಮೇಲೆ ಹೇಳಲಾಗಿದೆ. ಆದರೂ 1925ರ ಡಿಸೆಂಬರ್ ವರೆಗೆ ಪಾರ್ಟಿ ಕೇಂದ್ರ ಸಮಿತಿಯನ್ನು ರಚಿಸಲಾಗಲಿಲ್ಲ.

ಕಾನ್ಪುರ ಒಳಸಂಚು ಮೊಕದ್ದಮೆ

1923ರ ಮೇ ತಿಂಗಳಲ್ಲಿ ಶೌಕತ್ ಉಸ್ಮಾನಿ ಕಾನ್ಪುರದಲ್ಲಿ ಬಂಧಿಸಲ್ಪಟ್ಟರು (ಇರಾನಿನ ಮೂಲಕ ಅವರು ಮಾಸ್ಕೋದಿಂದ ಹಿಂತಿರುಗಿದ್ದರು) ಮತ್ತು ನಾನು ಕಲ್ಕತ್ತೆಯಲ್ಲಿ ಬಂಧಿಸಲ್ಪಟ್ಟೆ, ಕೆಲ ದಿನಗಳ ನಂತರ ಲಾಹೋರಿನಲ್ಲಿ ಗುಲಾಂ ಹುಸೇನ್ ದಸ್ತಗಿರಿಯಾದರು. ಬಂಗಾಳ ಪ್ರಾಂತ ಖೈದಿಗಳ ಕಾಯಿದೆ 1818ರ (ರೆಗ್ಯುಲೇಷನ್ III, 1818) ಪ್ರಕಾರ ಯಾವ ವಿಚಾರಣೆಯು ಇಲ್ಲದೆ ನಾವು ಮೂವರು ವಿವಿಧ ಜೈಲುಗಳಲ್ಲಿದ್ದೆವು. 1923ರ ಡಿಸೆಂಬರ್ ತಿಂಗಳಲ್ಲಿ ನಳಿನಿಗುಪ್ತರವರ ದಸ್ತಗಿರಿಯಾಯಿತು ಮತ್ತು ಅವರೂ ವಿಚಾರಣೆಯಿಲ್ಲದೆ ಬಂಧಿಸಿಡಲ್ಪಟ್ಟರು. ಅವರು ಯಾವ ಪಕ್ಷದ ಸದಸ್ಯರೂ ಆಗಿರಲಿಲ್ಲ ಮತ್ತು ಅವರು ತಾವು ರಾಷ್ಟ್ರೀಯ ಕ್ರಾಂತಿಕಾರಿ ಎಂದು ಹೇಳಿಕೊಂಡಿದ್ದರು. ಸಾಹಸ ಕಾರ್ಯಗಳಲ್ಲಿ ಅವರಿಗೆ ಹೆಚ್ಚು ಪ್ರೀತಿ ಇದ್ದುದರಿಂದ ಅವರು ಯುರೋಪಿಗೂ ಮತ್ತು ಭಾರತಕ್ಕೂ ನಡುವೆ ನಮ್ಮ ಗೂಢಚಾರರಾಗಿ ಕೆಲಸ ಮಾಡುತ್ತಿದ್ದರು. 1924ರ ಮಾರ್ಚ್ ತಿಂಗಳಲ್ಲಿ ಭಾರತ ಸರಕಾರವು ಇಂಡಿಯನ್ ಪೀನಲ್ ಕೋಡಿನ 121 ಎ ಸೆಕ್ಷನ್‌ನ ಪ್ರಕಾರ ಕಾನ್ಪುರ ಜಿಲ್ಲಾ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಚಾರ್ಜಷೀಟನ್ನು ಹಾಕಿತು. ಈ ಮೊಕದ್ದಮ್ಮೆಯಲ್ಲಿ 1. ಎಸ್. ಎ. ಡಾಂಗೆ; 2. ಶೌಕತ್ ಉಸ್ಮಾನಿ; 3. ಮುಜಫರ್ ಅಹಮದ್; 4. ನಳಿನಿಗುಪ್ತ; 5. ಗುಲಾಂ ಹುಸೇನ್; 6. ಸಿಂಗಾರವೇಲು ಚೆಟ್ಟಿಯಾರ್; 7. ರಾಮಚಂದ್ರ ಲಾಲ್ ಶರ್ಮ; ಮತ್ತು 8. ಮಣಬೇಂದ್ರನಾಥ್ ರಾಯ್ (ಎಂ. ಎನ್. ರಾಯ್) ರವರು ಅಪಾದಿತರಾಗಿದ್ದರು.

ಮೊದಲ ನಾಲ್ವರು ಮಾತ್ರ ಕೋರ್ಟಿನಲ್ಲಿ ಹಾಜರ್ ಮಾಡಲ್ಪಟ್ಟರು. ಸಿಂಗಾರವೇಲು ಚೆಟ್ಟಿಯಾರ್‌ರವರು ಅಸ್ವಸ್ಥರಾಗಿದ್ದುದರಿಂದ ಅವರನ್ನು ಕೋರ್ಟಿಗೆ ತರಲಿಲ್ಲ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಗುಲಾಂ ಹುಸೇನ್ ...

ಯಾಚನೆ ಮಾಡಿ ತಮ್ಮ ಸ್ವಾತಂತ್ರ್ಯವನ್ನು ಕೊಂಡುಕೊಂಡರು. ರಾಮಚಂದ್ರ ಲಾಲ್‌ಶರ್ಮರವರು ಪಾಂಡಿಚೇರಿಯಲ್ಲಿದ್ದುದರಿಂದ ಫ್ರೆಂಚ್ ಸರಕಾರದ ರಕ್ಷಣೆಯಲ್ಲಿದ್ದರು ಮತ್ತು ಅವರನ್ನು ಕೋರ್ಟಿಗೆ ಹಾಜರ್ ಮಾಡಲಾಗಲಿಲ್ಲ. ಎಂ. ಎನ್. ರಾಯ್ ಅವರು ಯುರೋಪಿನಲ್ಲಿದ್ದುದರಿಂದ ಅವರನ್ನು ಕೋರ್ಟಿಗೆ ತರುವ ಪ್ರಶ್ನೆಯೇ ಇರಲಿಲ್ಲ. ಕರ್ನಲ್ ಸಿ. ಕಾಯ್ (ನಂತರ ಸರ್ ಸಿಸಿಲ್ ಕಾಯ್), ಕೇಂದ್ರ ಗುಪ್ತ ಪೋಲೀಸ್ ಬ್ಯೂರೋದ ಡೈರಕ್ಟರ್‌ರವರು ಫಿರ್ಯಾದಿಯಾಗಿದ್ದರು. ಈ ಮೊಕದ್ದಮೆಯಲ್ಲಿ ದೂಡಲಾಗಿದ್ದ ಅಪಾದನೆ ಮತ್ತು ಆ ನಂತರ ಮೀರತ್ ಒಳಸಂಚಿನ ಮೊಕದ್ದಮೆಯಲ್ಲಿ ಮಾಡಲಾಗಿದ್ದ ಅಪಾದನೆ ಎರಡೂ ಒಂದೇ ತೆರನಾಗಿತ್ತು. ಕರ್ನಲ್ ಕಾಯ್‌ರವರ ಕೋರಿಕೆಯಂತೆ ಪತ್ರಿಕೆಗಳು ಈ ಮೊಕದ್ದಮೆಯನ್ನು ಕಾನ್ಪುರ ಬೋಲ್ಷೆವಿಕ್ ಒಳಸಂಚು ಮೊಕದ್ದಮೆ ಎಂದು ಕರೆದವು. ಹೀಗೆ ಮಾಡುವುದರಿಂದ ಕರ್ನಲ್‌ಕಾಯ್ ಸೋವಿಯಟ್ ರಷ್ಯವನ್ನು ಪ್ರಚಾರದ ಉದ್ದಿಶ್ಯಕ್ಕಾಗಿ ತಂವ ಹಂಚಿಕೆ ಹೂಡಿದ್ದರು.

ಈ ಮೊಕದ್ದಮೆಯ ವಿಚಾರಣೆ ನಡೆಯುತ್ತಿದ್ದಾಗ, ಆಗಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಒಂದು ವ್ಯಕ್ತಿ ಕುಳಿತಿರುತ್ತಿದ್ದುದು ಕಾಣಬರುತ್ತಿತ್ತು. ಆತನ ಹೆಸರು ಸತ್ಯಭಕ್ತ. ಅದು ಅವನ ಮಾತಾ ಪಿತೃಗಳು ಇಟ್ಟ ಹೆಸರಾಗಿರಲಿಲ್ಲ. ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ವಾಸಿಸುತ್ತಿದ್ದಾಗ ಅವನು ಆ ಹೆಸರನ್ನಿಟ್ಟುಕೊಂಡಿದ್ದನು. ಸುಮಾರು ಅಲ್ಲಿ ಸತ್ಯದ ಬಗ್ಗೆ ತುಂಬಾ ಪ್ರಯೋಗಗಳು ನಡೆಯುತ್ತಿತ್ತೆಂದು ಕಾಣುತ್ತದೆ!

ಕಾಲಕ್ರಮೇಣ ಮೊಕದ್ದಮೆಯನ್ನು ಸೆಕ್ಷನ್ಸ್ ಕೋರ್ಟಿಗೆ ವರ್ಗಾಯಿಸಲಾಯಿತು. ನ್ಯಾಯಾಧೀಶರು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಾಲ್ಕು ವರ್ಷ ಕಠಿಣ ಶಿಕ್ಷೆಯ ಸಜೆಯನ್ನು ವಿಧಿಸಿದರು. ಈ ನ್ಯಾಯಾಧೀಶರು—ಹೆಚ್. ಎಲ್. ಹೋಂ—ಬಹಳ ಕುಪ್ರಸಿದ್ಧರಾಗಿದ್ದರು. ವಿಖ್ಯಾತವಾದ ಚೌರಿಚೌರ ಮೊಕದ್ದಮೆಯಲ್ಲಿ ಇವರು 172 ಮಂದಿಗೆ ಗಲ್ಲಿಗೆ ಹಾಕುವುದರ ಮೂಲಕ ಮರಣದಂಡನೆ ಶಿಕ್ಷೆ ವಿಧಿಸಿದ್ದರು. ನಾಲ್ಕು ಬೇರೆ ಬೇರೆ ಜೈಲುಗಳಿಗೆ ವರ್ಗಾಯಿಸಲ್ಪಟ್ಟಿದ್ದರಿಂದ, ಹಾಗೂ ಅಲ್ಲಿ ನಮ್ಮ ಕತ್ತುಗಳ ಸುತ್ತು ಕಬ್ಬಿಣದ ಸರಪಳಿ ಮತ್ತು ನಮ್ಮ ಕಾಲುಗಳಿಗೆ ಕಬ್ಬಿಣದ ಬಳೆಗಳು ಹಾಕಲ್ಪಟ್ಟಿದ್ದುದರಿಂದ (ಉತ್ತರ ಪ್ರದೇಶದ ಜೈಲುಗಳಲ್ಲಿ ಆ ಕಾಲದಲ್ಲಿ ಈ ಪದ್ಧತಿ ಇತ್ತು), ಹೊರ ಜಗತ್ತಿನಿಂದ ನಾವು ಸಂಪೂರ್ಣವಾಗಿ ಬೇರ್ಪಡಿಸಲ್ಪಟ್ಟಿದ್ದೆವು. ಮತ್ತೊಂದು ಕಡೆ ಮೇಲೆ ಹೇಳಿದ ಸತ್ಯಭಕ್ತ ತಾನು ಭಾರತೀಯ ಕಮ್ಯೂನಿಸ್ಟ್ ಪಕ್ಷವನ್ನು ಸ್ಥಾಪಿಸಿರುವುದಾಗಿ ಪತ್ರಿಕೆಗಳಲ್ಲಿ ಘೋಷಿಸಿದ.

ರಾಯ್ ಬರೇಲಿ ಜಿಲ್ಲೆ ಜೈಲಿನಲ್ಲಿ ಒಮ್ಮೆ ನಾನು ರಕ್ತ ಕಾರಿದೆ. ಸರಿಯಾದ ಆಹಾರ ಮತ್ತು ವಾಸಸ್ಥಳ ಇಲ್ಲದುದರಿಂದಾಗಿ ನನ್ನ ದೇಹಸ್ಥಿತಿ ಪೂರ್ಣವಾಗಿ ಹಾಳಾಗಿತ್ತು. ಜೈಲಿನಲ್ಲಿದ್ದ ಸಿವಿಲ್ ಸರ್ಜನ್ ಸೂಪರಿಂಟೆಂಡೆಂಟ್ ಅದು ಅಷ್ಟೇನೂ ಅಪಾಯವಾದುದೇನಲ್ಲ ಎಂದು ಹೇಳಿದ. ಆದರೆ ನಾನು ನಿಧಾನವಾಗಿ ಶಕ್ತಿಹೀನನಾಗುತ್ತಲೇ ಇದ್ದೆ. ಮುಂದವಾಗಿ ಜ್ವರವೂ

ಬರುತ್ತಿತ್ತು ಮತ್ತು ತೀವ್ರವಾಗಿ ನನ್ನ ತೂಕ ಕಡಿಮೆಯಾಗುತ್ತಿತ್ತು. ಈ ಸ್ಥಿತಿಯಲ್ಲಿ ನನ್ನನ್ನು ಅಲ್ಮೋರಾ ಜಿಲ್ಲೆಯ ಜೈಲಿಗೆ ಸಾಗಿಸಲಾಯಿತು. ನನ್ನ ಶಿಕ್ಷೆಯ ಅವಧಿಯು ತೀರುವುದಕ್ಕೆ ಮುಂಚೆಯೇ, ನನ್ನ ದೇಹಸ್ಥಿತಿಯ ಕಾರಣದಿಂದ ಭಾರತ ಸರಕಾರದ ಆಜ್ಞೆಯ ಮೇರೆಗೆ ಸೆಪ್ಟಂಬರ್ 1925ರಲ್ಲಿ ಅಲ್ಲಿಂದ ನನ್ನನ್ನು ಬಿಡುಗಡೆ ಮಾಡಲಾಯಿತು. ನಾನು ಬಹಳ ಬಲಹೀನನಾಗಿದ್ದೆ. ಆದ್ದರಿಂದ ಅಲ್ಮೋರಾದಲ್ಲಿಯೇ ಇರಬೇಕಾಯಿತು.

ಅಲ್ಲಿ ನಾನು ಮೊದಲ ಬಾರಿಗೆ ಸತ್ಯಭಕ್ತನ ಭಾರತೀಯ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಕೇಳಿದೆ ಮತ್ತು ಪತ್ರಿಕೆಗಳಲ್ಲಿ ಓದಿದೆ. ಅಷ್ಟೇ ಅಲ್ಲದೆ ಕಾನ್ಪುರದಲ್ಲಿ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಕಮ್ಯೂನಿಸ್ಟ್ ಸಮ್ಮೇಳನವೊಂದು ನಡೆಯುವುದೆಂದೂ ನಾನು ಪತ್ರಿಕೆಗಳಲ್ಲಿ ಓದಿದೆ. ಲಂಡನ್ನಿನಲ್ಲಿದ್ದ ಕಾಮ್ರೇಡ್ ಸಪೂರ್ಜಿ ಸಕ್ಲತ್‌ವಾಲರವರನ್ನು ಸಮ್ಮೇಳನದ ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳಲಾಗಿದ್ದಿತು. ಆರಂಭದಲ್ಲಿ ಅವರು ಬರುವುದಕ್ಕೆ ಒಪ್ಪಿಕೊಂಡಿದ್ದರೆಂದೂ ಆದರೆ ಕೊನೆಗೆ ಗ್ರೇಟ್ ಬ್ರಿಟನ್ ಕಮ್ಯೂನಿಸ್ಟ್ ಪಕ್ಷವು ಅವರಿಗೆ ಬರಲು ಅನುಮತಿ ಕೊಡಲಿಲ್ಲವೆಂದೂ ತಿಳಿಸಲಾಗಿದ್ದಿತು. ನಾನು ಜೈಲಿನಿಂದ ಬಿಡುಗಡೆಯಾದುದಕ್ಕೆ ನನ್ನನ್ನು ಅಭಿನಂದಿಸಿ ಸತ್ಯಭಕ್ತ ಅಲ್ಮೋರದಲ್ಲಿದ್ದ ನನಗೆ ಪತ್ರ ಬರೆದರು. ಆ ಪತ್ರದಲ್ಲಿ ಕಾನ್ಪುರ ಸಮ್ಮೇಳದಲ್ಲಿ ನಾನು ಭಾಗವಹಿಸಬೇಕೆಂದೂ ಕೇಳಿಕೊಂಡಿದ್ದರು. ಅಷ್ಟು ಹೊತ್ತಿಗೆ ನಾನು ಸಾಕಷ್ಟು ಸುಧಾರಿಸಿಕೊಂಡಿದ್ದೆ. ಅಷ್ಟೇ ಅಲ್ಲದೆ ಡಿಸೆಂಬರ್ ಅಂತ್ಯದ ವೇಳೆಗೆ ಅಲ್ಮೋರದಲ್ಲಿ ಹವಾಮಾನವು ಸೊನ್ನೆಗೂ ಕಡಿಮೆಯಾಗಿ ಶೀತಗೊಂಡಿತ್ತು. ಅಂಥ ಪರಿಸ್ಥಿತಿಯಲ್ಲಿ ನಾನು ಹೇಗಿದ್ದರೂ ಕಲ್ಕತ್ತೆಗೆ ಹೋಗಬೇಕಿತ್ತು. ಕಾನ್ಪುರವನ್ನು ತಲುಪಿದ ಮೇಲೆ ನಾನು ಕಾಮ್ರೇಡ್ ಎಸ್. ವಿ. ಘಾಟೆ, ಕೆ. ಎನ್. ಜೋಗ್ಳೇಕರ್ ಮತ್ತು ಆರ್. ಎಸ್. ನಿಂಬ್‌ಕರ್‌ರವರನ್ನು ಭೆಟ್ಟಿಯಾದೆ. ಅವರು ಆಗಲೇ ಬಂದಿದ್ದರು. ಅವರನ್ನು ಕಂಡು ನನಗೆ ಹೆಚ್ಚು ವಿಶ್ವಾಸ ಮೂಡಿತು. ಯಾಕೆಂದರೆ, ಜೈಲಿನಲ್ಲಿದ್ದಾಗ ಕಾಮ್ರೇಡ್ ಡಾಂಗೆಯವರಿಂದ ಈ ಮೂವರ ಬಗ್ಗೆಯೂ ಕೇಳಿ ತಿಳಿದಿದ್ದೆ. ಕಾನ್ಪುರದಲ್ಲಿ ನಾನು ಮೊದಲ ಬಾರಿಗೆ ಕಾಮ್ರೇಡ್ ಅಜೋಧ್ಯ ಪ್ರಸಾದ್, ಜಾನಕಿ ಪ್ರಸಾದ್ ಮತ್ತಿತರರನ್ನು ಭೆಟ್ಟಿಯಾದೆ.

ಕಾನ್ಪುರ ಸಮ್ಮೇಳನ

ಸಮ್ಮೇಳನದ ಸ್ವಾಗತ ಸಮಿತಿಗೆ ಮೌಲಾನ ಹಜ್ರಾತ್ ಮೊಹಾನಿ ಅಧ್ಯಕ್ಷರಾಗಿದ್ದರು ಮತ್ತು ಕಾಮ್ರೇಡ್ ಸಿಂಗಾರವೇಲು ಚೆಟ್ಟಿಯಾರ್ ಸಮ್ಮೇಳನಾಧ್ಯಕ್ಷರಾಗಿದ್ದರು. (ನಮ್ಮ ಶಿಕ್ಷೆಗೆ ಗುರಿಪಡಿಸಲಾದ ನಂತರ ಚೆಟ್ಟಿಯಾರರು ಕಾನ್ಪುರ ಕೋರ್ಟಿನಲ್ಲಿ ಸ್ವತಃ ಹಾಜರಾದರು, ಆದರೆ ಭಾರತ ಸರಕಾರವು ಮೊಕದ್ದಮೆಯನ್ನು ಮುಂದುವರಿಸಲಿಲ್ಲ ಮತ್ತು ಅವರ ಮೇಲಿನ ಆರೋಪಗಳಿಗೆ ಸರಿಯಾದ ಸಾಕ್ಷಿಗಳೂ ಇರಲಿಲ್ಲ) ಆರಂಭದಲ್ಲೇ ನಮ್ಮ ಅಭಿಪ್ರಾಯಕ್ಕೂ ಸತ್ಯಭಕ್ತನ ಅಭಿಪ್ರಾಯಕ್ಕೂ ಘರ್ಷಣೆಯಾಯಿತು. ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಪದ್ಧತಿಯಂತೆ ಪಾರ್ಟಿಯ ಹೆಸರು ಭಾರತ ಕಮ್ಯೂನಿಸ್ಟ್ ಪಕ್ಷ

ಎಂದಿರಬೇಕೆಂದು ನಾವು ಹೇಳಿದೆವು. ...ವರು ತಾನು ಅಂತರರಾಷ್ಟ್ರೀಯವಾದ... ಒಪ್ಪುವುದಿಲ್ಲವೆಂದು ತಿಳಿಸಿದರು. ತನ... ಪಕ್ಷವು ಭಾರತೀಯ ಮಾದರಿಯದಾಗಿರು... ದೆಂದೂ ಆದ್ದರಿಂದ ಅದರ ಹೆಸರು ಭಾ... ತೀಯ ಕಮ್ಯೂನಿಸ್ಟ್ ಪಕ್ಷವಾಗಿರುವುದೆಂ... ದೂ ಹೇಳಿದರು. ನಾವು ನಮ್ಮ ಅಭಿ... ಪ್ರಾಯದ ಬಗ್ಗೆ ದೃಢವಾಗಿದ್ದೆವು. ಸತ್ಯ... ಭಕ್ತ ತನ್ನ ಫೈಲು ಮತ್ತು ಕಾಗದ ಪತ್ರ... ಗಳನ್ನು ಎತ್ತಿಕೊಂಡು ಹೊರಟುಹೋದ... ರು. ಅವರು ತಮ್ಮ ಪಕ್ಷದ ಸದಸ್ಯತ್ವವು... 300ಕ್ಕೂ ಹೆಚ್ಚಾಗಿದೆಯೆಂದು ಹೇಳಿಕೊಂ... ಡಿದ್ದರು. ಈ ಸದಸ್ಯರು ಯಾರೆಂಬುದು... ನಮಗೆ ಗೊತ್ತಾಗಲೇ ಇಲ್ಲ. ನಾನು ಅ... ನಂತರ ಅವರನ್ನು ನೋಡಿಯೇ ಇಲ್ಲ... ಕಾಮ್ರೇಡ್ ಘಾಟೆ ಒಮ್ಮೆ ಅವರನ್ನು... ಮುಂಬಯಿಯಲ್ಲಿ ಭೇಟಿ ಮಾಡಿದ್ದರೆಂದು... ಕೇಳಿದೆ. ತಾವು ರಾಜಕೀಯದಿಂದ ನಿವೃ... ತ್ತರಾಗಿರುವುದಾಗಿ ಅವರು ಘಾಟೆಯವರ... ತಿಳಿಸಿದರಂತೆ.

ವಿವಿಧ ಪ್ರದೇಶಗಳಲ್ಲಿದ್ದ ಕಮ್ಯೂನಿಸ್ಟ... ರನ್ನು ಒಂದುಗೂಡಿಸಿ ಕಾನ್ಪುರದಲ್ಲಿ ಮೊದ... ಲಬಾರಿಗೆ ನಾವು ಭಾರತ ಕಮ್ಯೂನಿಸ್ಟ್... ಪಕ್ಷದ ಕೇಂದ್ರ ಸಮಿತಿಯನ್ನು ರಚಿಸಿದೆ... ವು. ಸಮ್ಮೇಳನವು ಬಹಿರಂಗವಾಗಿ ನಡೆ... ಯಿತು ಆದ್ದರಿಂದಾಗಿ, ಸಮಿತಿಯೂ ಬಹಿ... ರಂಗವಾಗಿ ರಚಿತವಾಯಿತು. ಇದಕ್ಕಾಗಿ... ಹೊರಗಿನಿಂದಲೂ ಮತ್ತು ದೇಶದೊಳಗೂ... ನಾವು ಬಹಳ ಟೀಕೆಗೆ ಗುರಿಯಾದೆವು. ... ನಮ್ಮ ಮೇಲಣ ಈ ಟೀಕೆ ಸರಿಯಾಗಿಯೇ... ಇತ್ತು. ಆದರೆ ಬೇರೆ ದಾರಿಯೂ ಇರ... ಲಿಲ್ಲ. ನಾವು ಕಾನ್ಪುರ ಸಮ್ಮೇಳನದಲ್ಲಿ... ಸೇರಿಕೊಳ್ಳದಿದ್ದಲ್ಲಿ ಸತ್ಯಭಕ್ತನ ಕಮ್ಯೂ... ನಿಸ್ಟ್ ಪಾರ್ಟಿಯು ಮುಂದೆ ಸಾಕಷ್ಟು ಆ... ತಂಕವನ್ನು ತರುತ್ತಿತ್ತು.

ಕಾನ್ಪುರ ಸಮ್ಮೇಳದನಂತರ ಮೌಲಾ... ನಾ ಹಜ್ರಾತ್ ಮೊಹಾನಿ ನಮ್ಮೊಂದಿಗೆ... ಕೆಲಕಾಲ ಇದ್ದರು. ಅವರು ಪ್ರಖ್ಯಾತ... ಉರ್ದು ಕವಿಯಾಗಿದ್ದರು. ಮತ್ತು ಸ್ವಾ... ತಂತ್ರ್ಯ ಹೋರಾಟದಲ್ಲಿ ಅಗ್ರಯೋಧ... ರಾಗಿದ್ದರು. ಅವರು ಅನೇಕಬಾರಿ ಬಂಧಿತ... ರಾಗಿದ್ದರು. ಮತ್ತು ಬೇಕಾದಷ್ಟು ತೊಂ... ದರೆ ಅನುಭವಿಸಿದ್ದರು. ಅಹಮದಾಬಾದ್... ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಮೊ... ದಲ ಬಾರಿಗೆ ಸಂಪೂರ್ಣ ಸ್ವಾತಂತ್ರ್ಯದ... ಬಗ್ಗೆ ಗೊತ್ತುವಳಿಯನ್ನು ಮಂಡಿಸಿದ್ದರು. ... ಅವರ ನಿರ್ಣಯವನ್ನು ಪ್ರತಿನಿಧಿಗಳು ತಿರ... ಸ್ಕರಿಸಿದ್ದರು. ಈ ಗೊತ್ತುವಳಿಯನ್ನು... ಮಂಡಿಸಿದ್ದಕ್ಕಾಗಿ ಅವರನ್ನು ಸೆಷನ್ಸ್... ಕೋರ್ಟಿನಲ್ಲಿ ವಿಚಾರಣೆಗೊಳಪಡಿಸಲಾ... ಯಿತು ಮತ್ತು ಜೀವಾವಧಿ ಶಿಕ್ಷೆಗೆ ಗುರಿ... ಯಾಗ ಬೇಕಾಯಿತು. ಆದರೆ, ನಂತರ... ಮುಂಬಯಿ ಹೈಕೋರ್ಟು ಈ ಶಿಕ್ಷೆಯನ್ನು... ರದ್ದುಗೊಳಿಸಿತು. ಅವರು ಮುಸ್ಲಿಂಲೀಗ್... ಸೇರುವುದಕ್ಕೆ ನಾವು ಬೆಂಬಲವೀಯ... ದಿದ್ದುದರಿಂದ 1927ರಲ್ಲಿ ಅವರು ನಮ್ಮ... ಪಾರ್ಟಿಯನ್ನು ಬಿಟ್ಟರು, ನಾವು ಅವರು... ಮುಸ್ಲಿಂಲೀಗ್ ಸೇರುವುದಕ್ಕೆ ಬೆಂಬಲ... ಕೊಡದಿದ್ದರೂ, ಕಲ್ಕತ್ತಾದಲ್ಲಿ ಜನವರಿ... 1928ರಲ್ಲಿ ನಡೆದ ಮುಸ್ಲಿಂಲೀಗ್ ಸಮ್ಮೇ... ಳನದಲ್ಲಿ ಕಾಂಗ್ರೆಸ್‌ನ ಮುಖಂಡರು... ಗಳು ಭಾಗವಹಿಸಿದ್ದರು.

ಕಾನ್ಪುರದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ರಚಿಸಲ್ಪಟ್ಟ...

(ಮುಂದೆ ಇದೆ)

ರಾಜ್ಯಗಳ ಗಡಿಹೊಂದಾಣಿಕೆಯ ಪ್ರಶ್ನೆ—

ನಿಜಲಿಂಗಪ್ಪನವರು ನಿಶ್ಚಿತ ಧೋರಣೆ ಅನುಸರಿಸಬೇಕು

ಭಾಷಾವಾರು ರಾಜ್ಯಗಳ ಪುನರ್ವಿಂಗಡನೆಯಾನನಂತರ ಆಯಾ ರಾಜ್ಯಗಳ ಗಡಿ ಪ್ರದೇಶ ಪ್ರಶ್ನೆಯು ಇನ್ನೂ ಉಳಿದಿದೆ. ಇದರಿಂದಾಗಿ ಗಡಿ ಪ್ರದೇಶಗಳ ಜನರಷ್ಟೇ ಅಲ್ಲ, ದೇಶದ ಬಹುಭಾಗದ ಜನರಲ್ಲಿ ಅಸಂತುಷ್ಟತೆ, ಅಸಮಾಧಾನ ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಇದರಿಂದ ರಾಜ್ಯಗಳ ಅಭಿವೃದ್ಧಿಗೆ ಮತ್ತು ಅಂತರ್ರಾಜ್ಯಗಳೊಳಗಿನ ಸ್ನೇಹ ಸೌಹಾರ್ದತೆಗೆ ಬಾಧೆ ತಟ್ಟುತ್ತಿದೆ

ರಾಜ್ಯಗಳ ಪುನರ್ರಚನೆಯ ಪ್ರಶ್ನೆ ಎಷ್ಟು ಅತ್ಯಾವಶಕವಾಗಿತ್ತೋ, ಗಡಿ ಪ್ರದೇಶಗಳ ಪ್ರಶ್ನೆಯು ಅಷ್ಟೇ ಮಹತ್ವದ್ದಾಗಿರುತ್ತದೆ. ರಾಜ್ಯ ಪುನರ್ರಚನೆಯ ಘೋಷಣೆ ಮಾಡಿದಾಗಲೇ, ಗಡಿ ಪ್ರದೇಶಗಳ ಕುರಿತು ಅಂತಿಮ ನಿರ್ಣಯ ಕೊಡಬೇಕಾಗಿತ್ತು. ರಾಜ್ಯ ಪುನರ್ರಚನೆಯ ಆಯೋಗನವರಾಗಲೀ, ಕೇಂದ್ರ ಸರಕಾರದವರಾಗಲೀ, ಜನತೆಯ ಒತ್ತಾಯಕ್ಕೆ ಮಣಿದು, ರಾಜ್ಯ ಪುನರ್ರಚನೆಗೆ ಒಪ್ಪಿದರೂ, ನ್ಯಾಯವಾದ ತಳಹದಿಯ ಮೇಲೆ ಗಡಿ ಪ್ರಶ್ನೆಯನ್ನು ಬಿಡಿಸುವ ಹವ್ಯಾಸಕ್ಕೆ ಹೋಗಲಿಲ್ಲ. ಯಾಕೆಂದರೆ, ರಾಜ್ಯ ಪುನರ್ರಚನಾ ಆಯೋಗ ಮತ್ತು ಕೇಂದ್ರ ಸರಕಾರದವರು ಗಡಿಗಳ ಸಂಬಂಧ ತಪ್ಪು ತಳಹದಿಯ ಮೇಲೆ ಹೊರಟಿದ್ದರು. ರಾಜ್ಯ ಪುನರ್ಘಟನಾ ಆಯೋಗದವರು, ಆರ್ಥಿಕ, ಭಧ್ರತೆ, ಆಡಳಿತ ಸೌಕರ್ಯಗಳಿಗೆ ಮಹತ್ವ ಕೊಟ್ಟು ತಾಲೂಕನ್ನು ಘಟಕವನ್ನಾಗಿ ಅಂಗೀಕರಿಸಿದ್ದರು. ಇದನ್ನೇ ಕೇಂದ್ರ ಸರಕಾರ ಮತ್ತು ಸಂಸತ್ತು ಒಪ್ಪಿಕೊಂಡಿತ್ತು. ಈ ತಳಹದಿಯ ಮೇಲೆ ಗಡಿ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಲು ಸಾಧ್ಯವಿಲ್ಲ. ಕಮ್ಯೂನಿಸ್ಟ ಪಾರ್ಟಿಯವರು ಹೇಳಿದಂತೆ, ಭೌಗೋಳಿಕಸಂಲಗ್ನತೆ, ಸಾಮಾನ್ಯ ಭಾಷಾ ಬಹುಮತ ಮತ್ತು ಹಳ್ಳಿಯೇ ಘಟಕ ಈ ತತ್ವಗಳ ತಳಹದಿಯ ಮೇಲೆ ಗಡಿ ಪ್ರಶ್ನೆ ಬಿಡಿಸಬೇಕು. ಈ ಮೂಲಭೂತ ತತ್ವದಂತೆ ನಡೆಯದಿದ್ದರೆ, ಗಡಿ ಹೊಂದಾಣಿಕೆಯ. ಪ್ರಶ್ನೆ ಬಿಡಿಸಲ್ಪಡಲು ಸಾಧ್ಯವಿಲ್ಲ.

ಆಂಧ್ರ ಮತ್ತು ಮದ್ರಾಸಿನ ಗಡಿ ಪ್ರಶ್ನೆಯ ತಂಟೆ ಉದ್ಭವಿಸಿದಾಗ, ಶ್ರೀ ಪಾಟ್‌ಸ್ಕರರ ಮಧ್ಯಸ್ಥಿಕೆಯಲ್ಲಿ, ಹಳ್ಳಿಯನ್ನು ಘಟಕವನ್ನಾಗಿ ಹಿಡಿದು, ಎರಡೂ ಸರಕಾರಗಳಿಗೂ ಒಮ್ಮತವಾಗುವ ರೀತಿಯಲ್ಲಿ ಗಡಿ ತಂಟೆಯನ್ನು ಬಗೆಹರಿಸಲಾಯಿತು. ಆದರೆ ಇತರ ಪ್ರಾಂತಗಳ ಗಡಿ ಪ್ರಶ್ನೆಯಿನ್ನೂ ಬಗೆಹರಿದಿಲ್ಲ. ಆಂಧ್ರ—ಒರಿಸ್ಸಾ, ಮುಂಬಯಿ-ಕರ್ನಾಟಕ, ಕೇರಳ-ಕರ್ನಾಟಕ, ಆಂಧ್ರ-ಕರ್ನಾಟಕ ಮೊದಲಾದ ಗಡಿ ಪ್ರದೇಶಗಳನ್ನು ನಿರ್ಧರಿಸಬೇಕಾಗಿದೆ. ಗಡಿ ಹೊಂದಾಣಿಕೆಯ ಬಗ್ಗೆ ಸಂಬಂಧಿಸಿದ ಸರಕಾರಗಳ. ಒಮ್ಮತದಿಂದ ಯಾವದೇ ನಿರ್ಣಯ ಸ್ವೀಕರಿಸಿದರೆ ಅದನ್ನು ಮನ್ನಿಸುವುದಾಗಿ ಕೇಂದ್ರ ಗೃಹ ಮಂತ್ರಿಗಳು ಲೋಕಸಭೆಯಲ್ಲಿ ಹೇಳಿದ್ದುಂಟು. ಆದ ಕಾರಣ ಸಂಬಂಧಪಟ್ಟ ರಾಜ್ಯದ ಮಂತ್ರಿಗಳೇ ಒಂದೆಡೆ ಸೇರಿ ತಂತಮ್ಮ ರಾಜ್ಯಗಳ ಗಡಿ ಪ್ರಶ್ನೆಗಳ ಕುರಿತು ಹಳ್ಳಿಯೇ ಘಟಕವೆಂಬುದನ್ನು ಮೂಲತತ್ವವನ್ನಾಗಿ ಹಿಡಿದು, ವಿಚಾರವಿನಿಮಯ ಮಾಡಬೇಕು.

ಮುಂಬಯಿ, ಕೇರಳ, ಆಂಧ್ರ ಮತ್ತು ಮದ್ರಾಸ್ ಪ್ರಾಂತ ಸರಕಾರಗಳು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿವೆ. ಮತ್ತು ಈ ರಾಜ್ಯ ಸರಕಾರಗಳ ಕೂಡ ನಾವು ಗಡಿ ಸಂಬಂಧ ಚರ್ಚೆಮಾಡಿ ಒಂದು ನಿರ್ಣಯಕ್ಕೆ ಬರಬೇಕಾಗಿದೆ. ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಈಗಾಗಲೇ ಕೇರಳ ಮತ್ತು ಮುಂಬಯಿ ಮುಖ್ಯ ಮಂತ್ರಿಗಳ ಕೂಡ ವಿಚಾರ ಮಾಡಿರುವರಂತೆ. ರಾಜ್ಯ ಪುನರ್ಘಟನ ಆಯೋಗನ ಶಿಫಾರಸಿನಂತೆ ಬಹುಸಂಖ್ಯಾತ ಕನ್ನಡ ಪ್ರದೇಶವಾದ ಕಾಸರಗೋಡು ತಾಲ್ಲೂಕಿನ ಪೈಕಿ ಮೂರು ಫಿರ್ಕಾಗಳನ್ನು ಕರ್ನಾಟಕಕ್ಕೆ ಜೋಡಿಸಲು ತಾವು ತಯಾರಿದ್ದೇವಂತ ಕೇರಳ ಸರಕಾರ ತಿಳಿಸಿದಂತೆ ವದಂತಿಯಿದೆ. ಇದರ ಕುರಿತು ನಿಜಲಿಂಗಪ್ಪನವರ ಅಭಿಪ್ರಾಯವೇನೆಂದು ತಿಳಿಯಲಿಲ್ಲ.

ಮುಂಬಯಿಯ ಪ್ರಧಾನ ಮಂತ್ರಿ ಶ್ರೀ ಚವ್ಹಾಣ ಮತ್ತು ಶ್ರೀ ನಿಜಲಿಂಗಪ್ಪನವರೊಳಗೆ ಮುಂಬಯಿ—ಮೈಸೂರು ಗಡಿ ಸಂಬಂಧ ಚರ್ಚೆಯಾಗಿದ್ದು, ಇದರ ಹೆಚ್ಚಿನ ಮಾಹಿತಿ ಇದೀಗ ಬಯಲಿಗೆ ಬಿದ್ದಿದೆ. ಭೌಗೋಲಿಕ ಸಂಲಗ್ನತೆ, ಸಾಮಾನ್ಯ ಬಹುಮತ ಮತ್ತು ಹಳ್ಳಿಯೇ ಘಟಕ ಈ ತತ್ವಗಳ ತಳಹದಿಯ ಮೇಲೆ, ಮುಂಬಯಿ—ಮೈಸೂರು ಗಡಿ ಪ್ರಶ್ನೆಯನ್ನು ಬಿಡಿಸಲು ತಯಾರಿರುವುದಾಗಿ ಮುಂಬಯಿ ಸರಕಾರವು ಸೂಚಿಸಿದೆಯೆಂದು ತಿಳಿದು ಬರುತ್ತದೆ. ಇದು ಯೋಗ್ಯ ಸೂಚನೆಯೆಂದರೆ ತಪ್ಪಾಗಲಾರದು. ಆದರೆ ಕರ್ನಾಟಕದ ಮುಖ್ಯ ಮಂತ್ರಿಗಳಾಗಲೀ, ಕರ್ನಾಟಕದ ಕಾಂಗ್ರೆಸ್ ಮುಖಂಡರಾಗಲೀ ಈ ತತ್ವಗಳಿಗೆ ಒಪ್ಪಿಕೊಳ್ಳಲು ತಯಾರಿಲ್ಲ. ಕಮ್ಯೂನಿಸ್ಟ ಪಾರ್ಟಿ ಮಾತ್ರ ಯಾವಾಗಲೂ ಈ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದೆ. ಕರ್ನಾಟಕದ ಕಾಂಗ್ರೆಸ್ ಮುಖಂಡರಂತೆಯೇ, ನಿಜಲಿಂಗಪ್ಪನವರಾದರೂ ತಾಲ್ಲೂಕನ್ನೆ ಘಟಕವನ್ನಾಗಿ ಹಿಡಿಯಬೇಕೆಂದು ಪ್ರತಿಪಾದಿಸುತ್ತಿರುವರಂತೆ. ಕರ್ನಾಟಕದ ಕಾಂಗ್ರೆಸ್ಸಿನ ಮತ್ತು ನಿಜಲಿಂಗಪ್ಪನವರ ವಾದಸರಣಿ ಸರಿಯಲ್ಲವೆಂದು ಹೇಳಬೇಕಾಗುತ್ತದೆ.

ರಾಜ್ಯ ಪುನರ್ಘಟನೆಯಾಗಿ ಹದಿನೆಂಟು ತಿಂಗಳುಗಳ ಮೇಲ್ಪಟ್ಟರೂ, ನಮ್ಮ ಮುಖ್ಯ ಮಂತ್ರಿಗಳು, ಕಾಸರಗೋಡು, ಬಳ್ಳಾರಿ, ಜತ್ತ, ಅಕ್ಕಲಕೋಟ ಮೊದಲಾದ ಗಡಿ ಪ್ರದೇಶಗಳ ಕನ್ನಡಿಗರಿಗೆ ನ್ಯಾಯ ದೊರಕಿಸಿ ಕೊಡುವ ಯಾವದೇ ನಿರ್ದಿಷ್ಟ ನಿರ್ಣಯಕ್ಕೆ ಬರಲು ಪ್ರಯತ್ನ ಮಾಡಲಿಲ್ಲೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಬೆಳಗಾವಿ, ಕಾರವಾರಗಳಲ್ಲಿಯ ಕನ್ನಡ-ಮರಾಠಿವಾದವನ್ನು ಆದಷ್ಟು ತ್ವರಿತದಲ್ಲಿ ಬಗೆಹರಿಸುವುದು ಅತ್ಯಾವಶ್ಯಕ. ಇದರ ಸಂಬಂಧವಾದರೂ ಮುಖ್ಯ ಮಂತ್ರಿಗಳು ಯಾವದೇ ಪ್ರಯತ್ನ ಮಾಡುತ್ತಿಲ್ಲ. ಗಡಿ ಪ್ರದೇಶಗಳಲ್ಲಿ ಅಶಾಂತತೆ ಬೆಳೆಯುತ್ತಿದೆ. ಅಲ್ಲಿಯ ಜನರು ನಿರಾಶರಾಗುತ್ತಿದ್ದಾರೆ. ಜತ್ತ, ಅಕ್ಕಲಕೋಟ ಮೊದಲಾದ ವಿಭಾಗಗಳಲ್ಲಿ ಕನ್ನಡ ಶಾಲೆಗಳು ಮುಚ್ಚಲ್ಪಡುತ್ತಿವೆ. ಮಕ್ಕಳಿಗೆ ಮರಾಠಿ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಕೊಡಲಾಗುತ್ತಿದೆ. ಈ ಗಡಿ ಪ್ರದೇಶಗಳ ರಸ್ತೆ-ಸಾರಿಗೆ ಮೊದಲಾದ ಸೌಕರ್ಯಗಳ ಬೆಳವಣಿಗೆಗೆ ಅಡ್ಡಿ-ಅತಂಕಗಳನ್ನೊಡ್ಡಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ದುರ್ಲಕ್ಷಿಸಲ್ಪಡುತ್ತಿವೆ. ಮುಂಬಯಿ-ಮೈಸೂರು ಎರಡೂ ರಾಜ್ಯಗಳಲ್ಲಿಯೂ ಕಾಂಗ್ರೆಸ್ಸಿನಲ್ಲಿ ಒಂದೇ ರೂಪದ ತತ್ವ ತಳಹದಿಯಿಲ್ಲದಿರುವುದರಿಂದ, ಗಡಿ ಪ್ರಶ್ನೆ ನಿವಾರಣೆಯಾಗುತ್ತಿಲ್ಲ. ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲವಿದ್ದರೂ ಕೂಡ, ಗಡಿ ಪ್ರದೇಶಗಳಲ್ಲಿಯ ಜನರಿಗೆ ಅನ್ಯಾಯವಾಗುತ್ತಿದೆ. ಈ ಪ್ರಶ್ನೆ ಬಿಡಿಸಲ್ಪಡುವ ತನಕ ಯಾವ ಅಲ್ಪ ಭಾಷಾ ಜನರಿಗೂ ಅನ್ಯಾಯವಾಗದಂತೆ ನೋಡಿಕೊಳುವುದು ಕಾಂಗ್ರೆಸ್ ಸರಕಾರ ಮಹತ್ತರವಾದ ಜವಾಬ್ದಾರಿಯಿದ್ದರೂ ಕೂಡ, ಅಲ್ಪ ಭಾಷಿಕರಿಗೆ ಕಾಂಗ್ರೆಸ್ ಸರಕಾರ ಮಾಡುತ್ತಿರುವ ಅನ್ಯಾಯ ಅಪಹಾಸ್ಯಕರವಿದೆ. ಕಾಂಗ್ರೆಸ್ ಆಳಿಕೆಯನ್ನೂ ಕೇರಳದಲ್ಲಿ ಕಮ್ಯೂನಿಸ್ಟ ಆಳಿಕೆಯನ್ನು ಹೋಲಿಸಿ ನೋಡಿದರೆ, ಕಮ್ಯೂನಿಸ್ಟ ಆಳಿಕೆ ಅಲ್ಪ ಸಂಖ್ಯಾತರ ಬೇಡಿಕೆಗಳಿಗೆ ಎಷ್ಟು ಮಹತ್ವ ಕೊಡುತ್ತಿದೆಂಬುದು ತಿಳಿದು ಬರುತ್ತದೆ. ಕಾಸರಗೋಡಿನಲ್ಲಿ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಮುಂದುವರಿಸಬೇಕೆಂದು ಅಲ್ಲಿಯ ಜನರು ಕೇರಳ ಸರಕಾರವನ್ನು ಕೇಳಿಕೊಂಡಾಗ, ಕಮ್ಯೂನಿಸ್ಟ ಸರಕಾರ ಕೂಡಲೇ ಇದಕ್ಕೆ ಒಪ್ಪಿಕೊಂಡಿತು. ಆದರೆ ಜತ್ತ ತಾಲೂಕದಲ್ಲಿ ಮುಂಬಯಿ ಸರಕಾರ ಅನ್ಯಾಯಮಾಡುತ್ತಿದೆ. ಅಲ್ಲಿ ಕನ್ನಡ ಸಾಲೆಗಳನ್ನು ಮುಚ್ಚುವ ಪಾಡು ಬಂದಿದೆ.

ಗಡಿ ಪ್ರಶ್ನೆ ಸಂಬಂಧ ನಿಜಲಿಂಗಪ್ಪನವರು ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಯೋಗ್ಯವಲ್ಲ. ಮೈಸೂರು ಸರಕಾರದವರೂ, ಗಡಿ ಪ್ರಶ್ನೆ ಬಿಡಿಸುವುದರ ಸಲುವಾಗಿ ಮುಂಬಯಿ ಸರಕಾರದವರು ಮುಂದಿಟ್ಟ ತತ್ವಗಳನ್ನೇ ಮಾನ್ಯ ಮಾಡಿ, ಆ ತಳಹದಿಯ ಮೇಲೆ ಕರ್ನಾಟಕದ ಗಡಿ ಪ್ರಶ್ನೆಯನ್ನು ಕೂಡಲೇ ಬಿಡಿಸುವ ಉಪಕ್ರಮ ಕೈಕೊಳ್ಳಬೇಕು. ನೆನಪಾದಾಗ ಒಮ್ಮೆ ಆ ಮಂತ್ರಿಗಳನ್ನು ಭೇಟಿಯಾದದೆವು. ಅನೌಪಚಾರವಾಗಿ ಚರ್ಚೆ ಮಾಡಿದೆವು. ಇನ್ನು ಮುಂದಿನ ತಿಂಗಳು ಚರ್ಚೆ ಮಾಡುತ್ತೇವೆ ಎಂಬ ನಿರಾಶಮಯ ಹೇಳಿಕೆಗಳನ್ನೀಯುವ ಚಟವನ್ನು ಮೈಸೂರು ಮಂತ್ರಿಗಳು ಇನ್ನಾದರೂ ಬಿಟ್ಟುಬಿಡಬೇಕು. ಹಳ್ಳಿಯನ್ನೇ ಘಟಕವನ್ನಾಗಿ ಹಿಡಿದು, ಸಾಮಾನ್ಯ ಬಹುಮತ ಮತ್ತು ಭೌಗೋಲಿಕ ಸಂಲಗ್ನತೆಯ ತಳಹದಿಯ ಮೇಲೆ ಕರ್ನಾಟಕ ಪ್ರಾಂತದ ಗಡಿ ಪ್ರಶ್ನೆಯನ್ನು ಸರಕಾರದವರು ಕೂಡಲೇ ಬಿಡಿಸಬೇಕು ಮತ್ತು ಇದರ ಸಲುವಾಗಿ ಸಂಬಂಧಪಟ್ಟ ರಾಜ್ಯ ಮಂತ್ರಿಗಳೊಡನೆ ವಿಚಾರ ವಿನಿಮಯ ಮುಂದುವರಿಸಿ ಒಮ್ಮತದ ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ತಿಳಿಸಬೇಕು. ಈ ಪ್ರಶ್ನೆಯನ್ನು ಆದಷ್ಟು ತೀವ್ರ ಬಿಡಿಸುವಂತೆ, ಎಂ. ಎಲ್.ಎಗಳೂ, ಜನರು ಸರಕಾರದ ಮೇಲೆ ಹೆಚ್ಚಿನ ಒತ್ತಾಯ ತರಬೇಕು.

ಎನ್ ಕೆ. ಉಪಾಧ್ಯಾಯ
ಬಿಜಾಪುರ.

ಕೇರಳ—

ದೇವಿಕುಲಂ ಕ್ಷೇತ್ರದ ಉಪಚುನಾವಣೆ

ದೇವಿಕುಲಂ—ಸೇರಮೇಡು ದ್ವಿಸದಸ್ಯ ಕ್ಷೇತ್ರದ ಉಪಚುನಾವಣೆ ಮೇ ತಿಂಗಳ 16ರಂದು ನಡೆಯುವುದು ಈ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಮತಿ ರೋಸಮ್ಮ ಪೊನ್ನೂಸ್‌ರದರ ಚುನಾವಣೆಯು ರದ್ದಾದುದರ ಪರಿಣಾಮವಾಗಿ ಉಪ ಚುನಾವಣೆ ಜರಗುತ್ತಿದೆ. ಕೇರಳದಲಿ ಕಮ್ಯೂನಿಸ್ಟ ಪಕ್ಷವು ಅಧಿಕಾರ ವಹಿಸಿಕೊಂಡ ನಂತರದಲ್ಲಿ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಇದೇ ಮೊದಲನೆಯದು. ಈ ಉಪ ಚುನಾವಣೆಯು ಬಹಳ ಮುಖ್ಯವಾದುದಾಗಿದೆ, ಏಕೆಂದರೆ ಕಮ್ಯೂನಿಸ್ಟ ಪಾರ್ಟಿಯ ಉಮೇದುವಾರರನ್ನು ಇತರ ಎಲ್ಲ ವಿರೋಧ ಪಕ್ಷಗಳು ಒಂದುಗೂಡಿ ವಿರೋಧಿಸುವುದು.

ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು ಮತ್ತೆ ಈ ಕ್ಷೇತ್ರದಲ್ಲಿ ಕಮ್ಯೂನಿಸ್ಟ ಉಮೇದುವಾರರಾಗಿ ಸ್ಪರ್ಧಿಸಲಿದ್ದಾರೆ. ಕಾಂಗ್ರೆಸ್ ಉಮೇದುವಾರರಾಗಿ ಕೇರಳ ಐ.ಎನ್.ಟಿ.ಯು.ಸಿ. ನಾಯಕ ಬಿ. ಕೆ. ನಾಯರ್ ಸ್ಪರ್ಧಿಸಲಿದ್ದಾರೆ,

ಕಾಂಗ್ರೆಸ್ಸು ಈ ಚುನಾವಣೆಗೆ ಈಗಾಗಲೇ 16 ಲಕ್ಷ ರೂಗಳನ್ನು ವಸೂಲಿ ಮಾಡಿದೆಯೆಂದೂ, ಕಾಂಗ್ರೆಸ್ ಹೈ ಕಮಾಂಡ್ 5 ಲಕ್ಷ ರೂಪಾಯಿ ಕೊಟ್ಟಿರುವುದೆಂದೂ ತಿಳಿದು ಬಂದಿದೆ. ಈ ಕ್ಷೇತ್ರದಲ್ಲಿರುವ ಒಟ್ಟು ಒಂದೂವರೆ ಲಕ್ಷ ಮತದಾರರ ಪೈಕಿ ಒಂದು ಲಕ್ಷ ಮತದಾರರು ಪ್ಲಾಂಟೇಷನ್ ಕೆಲಸಗಾರರಾಗಿದ್ದಾರೆ. ಅವರಲ್ಲಿ 60,000 ಮಂದಿ ತಮಿಳರಾಗಿದ್ದಾರೆ. ಕಳೆದ ಬಾರಿ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು ತಮಿಳು ಕೆಲಸಗಾರರ ಸಂಘದ ಬೆಂಬಲ ಪಡೆದು ಆರಿಸಿ ಬಂದರೆಂದೂ ಈ ಬಾರಿ ಅವರ ಬೆಂಬಲ ದೊರಕುವುದಿಲ್ಲವೆಂದೂ ಕಾಂಗ್ರೆಸ್ ಲೆಖ್ಖ ಹಾಕಿದೆ. ಕಾಂಗ್ರೆಸ್ಸಿಗೆ ಬೆಂಬಲವಾಗಿ ದೊಡ್ಡ ದೊಡ್ಡ ಪ್ಲಾಂಟರುಗಳೂ ಮತ್ತಿತರರೂ ನಿಲ್ಲುವುದರಿಂದ ತಮಗೆ ಸಹಾಯಕವಾಗುವುದೆಂದು ತಿಳಿದಿದ್ದಾರೆ.

ಆದರೆ ಇದೆಲ್ಲ ಕನಸಿನ ಲೆಖ್ಖಾಚಾರ ಎಂದು ಹೇಳಬಹುದು. ಕಳೆದ ಚುನಾ

(೯ನೇ ಪುಟ ನೋಡಿ)

ನನ್ನ ಮೊದಲನೆಯ ಭೇಟಿ

— ಪಿ. ಸಬುನೋವಾ

1917ರ ನವೆಂಬರ್ ತಿಂಗಳು ಕೆಂಪು ರಕ್ಷಕ ತುಕಡಿಯೊಡನೆ ನನ್ನ ತಂದೆಯೂ ಅಣ್ಣನೂ ಹೊರಟು ಹೋದ ತರುವಾಯ ನಾನು,-ಆಗ 15 ವರ್ಷದ ಹುಡುಗಿ ಸ್ಮೊಲ್ನಿಗೆ ಹೋದೆನು. ನನ್ನ ಹಳೆಯ ಹರುಕಲಂಗಿಯೊಳಗಡೆಯೇ ಚಳಿಯಿಂದ ಗಡಗಡನೆ ನಡುಗುತ್ತಾ, ನಾನು ಸ್ಮೊಲ್ನಿಯ ಬಳಿ ಬಂದೆನು. ಕಾವಲುಗಾರರು ನನ್ನನ್ನು ನಿಲ್ಲಿಸಿದರು.

"ಎಲ್ಲಿ ಹೋಗುತೀಯಮ್ಮಾ, ಹುಡುಗೀ?"

"ನಾನು ಲೆನಿನರನ್ನು ನೋಡಬೇಕು."

ಬಹಳ ಹೊತ್ತು ಪಡಸಾಲೆಗಳಲ್ಲಿ ನಾನು ಓಡಾಡುತ್ತಿದ್ದೆ. ಕಟ್ಟಕಡೆಗೆ, ಕುಳ್ಳಾದ ಆಜಾನುಬಾಹುವೊಬ್ಬಾತನು ಅಲ್ಲಿಯ ಒಂದು ಕೊಠಡಿಯಲ್ಲಿ ನನ್ನನ್ನು ಕೂರಿಸಿದರು. ಆತನು ತುಂಬಾ ದಯಾರ್ದ್ರತೆಯನ್ನು ಅವರ ನೋಟದಲ್ಲಿಯೇ ತೋರಿಸಿದರು. ಅವರೊಡನೆ ಯಾವ ಸಂಕೋಚವೂ ಇಲ್ಲದೆಯೇ ನಾನು ಮಾತನಾಡಬಹುದೆನಿಸಿತು. ನನಗೆ ನಾನು ಲೆನಿನ್‌ರವರೊಡನೆ ಕೆಲಸ ಮಾಡಬಯಸುತ್ತೇನೆಂಬುದನ್ನು ಕೇಳಿ, ಆತನು ಕೇಳಿದರು:

"ಆತನ ಸಂಗಡ ನೀನು ಎಂತಹ ಕೆಲಸ ಮಾಡುವೆ?"

"ಅವರು ಏನು ಹೇಳಿದರೆ, ಅದು...."

"ಆತನು 'ಟೈಪು' ಮಾಡೆಂದು ಹೇಳಿದರೆ?"

'ಟೈಪು' ಮಾಡುವುದು (ಮುದ್ರಾ ಲೇಖನ ಯಂತ್ರ ನಡೆಸುವುದು) ನನಗೆ ತಿಳಿಯದೆಂದು ನಾನು ಅವರಿಗೆ ಹೇಳಿದೆನು. ಆದರೆ ನನ್ನ ಆ ಹೊಸ ಪರಿಚಿತರಿಗೆ ಇದರಿಂದ ಅಸಮಾಧಾನವೇನೂ ಆಗಲಿಲ್ಲ.

"ಬರದಿದ್ದರೆ ಕಲಿತುಕೊಳ್ಳುವೆ. ಪಕ್ಕದ ಕೊಠಡಿಗೆ ಹೋಗು. ಬೋಂಚ್ ಬ್ರೂಯೆವಿಚ್ಚರನ್ನು ನೋಡು, ಆತನೇ ವ್ಯವಹಾರ ವ್ಯವಸ್ಥಾಪಕರು ಇಲ್ಲಿ. ಲೆನಿನ್ನರು ಕಳಿಸಿದರೆಂದು ಆತನಿಗೆ ಹೇಳು."

ನಾನು ಆಶ್ಚರ್ಯದಿಂದ ಸ್ತಂಭೀಭೂತಳಾದೆನು. ಹಾಗಾದರೆ, ನಾನು ಮಾತನಾಡುತ್ತಿದ್ದುದ್ದು ಲೆನಿನ್ನರ ಸಂಗಡವೇ!

'ಟೈಪು' ಮಾಡುವುದನ್ನು ಬೋಂಚ್ ಬ್ರೂಯೆವಿಚ್ಚರು ನನಗೆ ಕಲಿಸಿದರು. ನಮ್ಮಿಬ್ಬರ ಜತೆಗೆ ಕ್ರಾಂತಿಯ ತರುವಾಯದ ಆ ಮೊದಲ ದಿನಗಳಲ್ಲಿ ಕೇವಲ ಹಲವರು ಮಾತ್ರವೇ ಇತರರು 'ಸೋವ್ನಾರ್ ಕೋಮ್'ನಲ್ಲಿ ಇರುತ್ತಿದ್ದರು. ನಾವು ಟಪ್ಪಾಲನ್ನು ತೆಗೆದುಕೊಂಡು ಲೆನಿನ್ನರಿಗೆ ತಲುಪಿಸುತ್ತಿದ್ದೆವು. ಲೆನಿನ್‌ರನ್ನು ಕಾಣ ಬಂದವರಿಗೆ ಅವರ ಭೇಟಿ ಮಾಡಿಸುತ್ತಿದ್ದೆವು. ಲೆನಿನ್ನರು ಬರೆದ ದಸ್ತೈವಜುಗಳನ್ನು ನಾನು 'ಟೈಪು' ಮಾಡುತ್ತಿದ್ದೆನು. ಅವರ ಅಕ್ಷರಗಳನ್ನು ಓದಿಕೊಳ್ಳುತ್ತಿದ್ದೆನಾದರೂ, ಅವಶ್ಯಕವೆನಿಸಿದಾಗ ಒಮ್ಮೊಮ್ಮೆ ಅವರನ್ನೇ ಕೇಳಬೇಕಾಗುತ್ತಿತ್ತು. ಅವರು ಯಾವಾಗಲೂ ಮನಃಪೂರ್ವಕವಾಗಿ ನನಗೆ ವಿವರಿಸಿ ತಿಳಿಸುತ್ತಿದ್ದರು.

ಕೆಲವು ತಿಂಗಳುಗಳ ತರುವಾಯ, ನಾನು ಚೆನ್ನಾಗಿಯೇ 'ಟೈಪು' ಮಾಡಲು ಕಲಿತುಕೊಂಡೆನು. ಒಂದು ದಿನ ಬೋಂಚ್ ಬ್ರೂಯೆವಿಚ್‌ರವರು ನನಗಾಗಿ ಹೇಳಿ ಕಳಿಸಿದರು. ನಾನು ಹೋದೊಡನೆಯೇ ಅವರೆಂದರು.

"ನಾನು ನಿನಗೆ ಒಂದು ಮಹತ್ವಪೂರ್ಣವಾದ ದಸ್ತಾವೇಜನ್ನು 'ಟೈಪು' ಮಾಡಲು ಕೊಡುವವನಿದ್ದೇನೆ. ನಿನ್ನ ಟೈಪುರೈಟರನ್ನು (ಮುದ್ರಾಲೇಖನ ಯಂತ್ರ) ಇಲ್ಲಿಗೇ ತಂದುಬಿಡು"

"ದುಡಿಯುವ ಮತ್ತು ಶೋಷಿತ ಜನರ ಹಕ್ಕುಗಳ ಪ್ರಕಟನೆ...."

ಉಳಿದುದೆಲ್ಲವನ್ನೂ ನಾನು ಅವರ ಸ್ವಹಸ್ತ ಪ್ರತಿಗಳನ್ನು ನೋಡಿಕೊಂಡೇ 'ಟೈಪು' ಮಾಡಿದೆನು: ಲೆನಿನ್ನರು ತಾವು ಸ್ವತಃ ಬರೆದಿದ್ದುದನ್ನು ಓದಿ ಹೇಳಲು ಇಷ್ಟಪಡುತ್ತಿರಲಿಲ್ಲ.

ಸೋವಿಯತ್ ಸರಕಾರದ ಮೊದಲ ದಸ್ತಾವೇಜುಗಳಲ್ಲಿ ಒಂದನ್ನು ನಾನು 'ಟೈಪು' ಮಾಡಿದುದು ಹೀಗೆಯೇ.

ಸ್ವತಂತ್ರ ಭಾರತದ ಬಗ್ಗೆ ಲೆನಿನ್ನರು ಕಂಡ ಕನಸು!

ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪಕರೂ ಸೋವಿಯೆತ್ ನಾಡಿನ ಕಾರ್ಮಿಕ ಜನತೆಯ ಪ್ರಿಯ ನಾಯಕರೂ ಆಗಿದ್ದ ವ್ಲಾದೀಮಿರ್ ಇಲ್ಯಿಚ್ ಲೆನಿನ್‌ರವರು 1870 ರ ಏಪ್ರಿಲ್ ದಿನಾಂಕ 22ರಂದು ಜನ್ಮ ತಾಳಿದರು.

ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುವ ದಬ್ಬಾಳಿಕೆಯನ್ನು—ಯಾವುದೇ ರೂಪದಲ್ಲಿ ಅದು ಕೂಡಬಹುದಾದರೂ ಕೂಡ—ಲೆನಿನ್ ರವರು ತೀವ್ರಾವೇಶದಿಂದ ದ್ವೇಷಿಸಿದರು. ಆದುದರಿಂದಲೇ ಅವರು ವಸಾಹತು ವಾದವನ್ನು ಸಂಪೂರ್ಣತಃ ಬಯಲಿಗೆಳೆಯುವುದರಲ್ಲಿ ಉಜ್ವಲ ಕಾರ್ಯ ಸಾಧನೆ ಮಾಡಿದರು. ಬ್ರಿಟಿಷ್ ಭಾರತೀಯ ಜನತೆಯನ್ನು ದೋಚಿ ಅವರ ಮೇಲೆ ಮೇ ದಬ್ಬಾಳಿಕೆಯನ್ನು ನಡೆಸುತ್ತಿದ್ದ ಬ್ರಿಟಿಷ್ ವಸಾಹತುವಾದದ ಕುರಿತು ಅವರು ಅನೇಕ ಕ್ರೋಧಪೂರ್ಣ ಕಟುಸತ್ಯ ವಚನಗಳನ್ನು ನುಡಿದಿದ್ದಾರೆ. ಭಾರತ ದೇಶದಲ್ಲಿ "ಸರಿ ಸುಮಾರು 30 ಕೋಟಿ ಜನರು ಬ್ರಿಟಿಷ್ ಅಧಿಕಾರಶಾಹಿಯ ಬಲಾತ್ಕಾರಕ್ಕೂ ಮತ್ತು ಲೂಟಿಗೂ ಸಿಕ್ಕಿಬಿದ್ದಿದ್ದಾರೆ ....ಭಾರತ ದೇಶದ ಬ್ರಿಟಿಷ್ ಆಡಳಿತ ವ್ಯವಸ್ಥೆಯೆನ್ನ ಬಹುದ ಹಿಂಸಾಕಾಟಕ್ಕೂ, ಕೊಳ್ಳೆಗೂ ಯಾವ ಕೊನೆಯೂ ಇಲ್ಲ. ಜನ ಸಮುದಾಯಗಳ ಇಂತಹ ಬಡತನವೂ ಮತ್ತು ಜನತೆಯ ಅಸ್ತಿಗತವಾದ ಕಂಗಾಲುತನವೂ, ಪ್ರಪಂಚದಲ್ಲಿ ಬೇರೆಲ್ಲಿಯೂ ಇಲ್ಲ!"—ಎಂದು ಲೆನಿನ್‌ರವರು ಬರೆದಿದ್ದರು. 1919ರಲ್ಲಿ ವಿ. ಐ. ಲೆನಿನ್‌ರವರು,— ಅಮೃತಸರದಲ್ಲಿ ನಿರಾಯುಧರಾಗಿದ್ದ ಜನರ ಮೇಲೆ ಸಿಡಿಗುಂಡುಗಳ ಮಳೆ ಸುರಿಸಿದ ಬ್ರಿಟಿಷ್ ವಸಾಹತುವಾದಿಗಳ ಬರ್ಬರತೆಗಳನ್ನು ಸಿಟ್ಟಿನಿಂದ ಖಂಡಿಸಿದರು.

ಮಹತ್ತರ ಭಾರತೀಯ ಜನತೆಯ ಭವಿಷ್ಯತ್ತಿನಲ್ಲಿ ವಿ. ಐ. ಲೆನಿನ್‌ರವರಿಗೆ ಗಾಢವಾದ ನಂಬಿಕೆಯಿತ್ತು. ನೂತನ ವಿಮುಕ್ತ ದೇಶವು,—ಸರ್ವ ಸ್ವತಂತ್ರ ಸಮೃದ್ಧ ಭಾರತವು,—ಸ್ವತಂತ್ರ ದೇಶಗಳ ನಡುವೆ ತಲೆಯೆತ್ತುವುದೆಂದು ಅವರು ಮುಂಗಂಡಿದ್ದರು. ಭಾರತೀಯ ಜನತೆಯ ರಾಷ್ಟ್ರೀಯ ವಿಮೋಚನಾ ಚಳವಳಿಯನ್ನು ಅವರು ಗಮನ ಪೂರ್ವಕವಾಗಿ ಅವಲೋಕಿಸಿದರು. 1908ರಷ್ಟು ಹಿಂದೆಯೇ "ಭಾರತ ದೇಶದ ಸ್ವಾತಂತ್ರ್ಯದ ಸಲುವಾಗಿ ಹೋರಾಟವು ತೀಕ್ಷ್ಣಗೊಳ್ಳುತ್ತಿದ್ದುದನ್ನು" ಅವರು ಗಮನಿಸಿದರು. ಆ ತರುವಾಯ ಅವರು ಹೀಗೆ ಬರೆದಿದ್ದರು: "ಚೀನಾ, ಪರ್ಷಿಯಾ, ಭಾರತ ಮತ್ತು ಇತರ ದೇಶಗಳಲ್ಲಿ ಕೋಟ್ಯಾಂತರ ಜನರ ರಾಷ್ಟ್ರೀಯ ಜೀವನವನ್ನು ಜಾಗೃತಗೊಳಿಸುವ ಪ್ರತಿಗಾಮಿ 'ಮಹಾ' ರಾಜ್ಯಶಕ್ತಿಗಳ ನೊಗ ಭಾರದಿಂದ ಅವುಗಳನ್ನು ವಿಮುಕ್ತಿಗೊಳಿಸುವ ನೀತಿಯ ಆನ ಪ್ಪಾನವನ್ನು ಕಳೆದ ದಶಕಗಳಲ್ಲಿ ನಾವು ಕಾಣುತ್ತ ಬಂದಿದ್ದೇವೆ."

1917ರ ಅಕ್ಟೋಬರು ಕ್ರಾಂತಿಯ ತರುವಾಯ ಲೆನಿನ್‌ರವರು ಸೋವಿಯತ್ ರಾಜ್ಯದ ಅಧಿಪತಿಯವರಾಗಿದ್ದಾಗ, ಸೋವಿಯೆತ್ ಭಾರತೀಯ ಮಹಾ ಮೈತ್ರಿಯ ನಿರ್ಮಾಣ ಕಾರ್ಯಕ್ಕೆ ಮೊದಲು ಬುನಾದಿ ಹಾಕಲಾಯಿತು. 1920ರ ಮಾರ್ಚ್ ದಿನಾಂಕ 4ರಂದು ಭಾರತೀಯ ಕ್ರಾಂತಿಕಾರಿ ಸಂಸ್ಥೆಯ ಸಭೆಯೊಂದರಲ್ಲಿ ಒಂದು ಗೊತ್ತುವಳಿಯು ಸ್ವೀಕೃತವಾಗಿ ಮಾಸ್ಕೋ ನಗರಕ್ಕೆ ಲೆನಿನ್‌ರವರಿಗೆ ಕಳಿಸಲ್ಪಟ್ಟಿತು. ಎಳೆಯ ಸೋವಿಯತ್ ರಾಜ್ಯದ ವಿದೇಶಾಂಗ ನೀತಿಯ ಸೂತ್ರಗಳಿಗೆ ಆ ಗೊತ್ತುವಳಿಯಲ್ಲಿ ಒಪ್ಪಿಗೆಯನ್ನು ವ್ಯಕ್ತಪಡಿಸಲಾಗಿತ್ತು. ಈ ಸಂದೇಶಕ್ಕೆ ಉತ್ತರವನ್ನು ಕೊಡುತ್ತಾ, ಲೆನಿನ್‌ರವರು,— ಪೀಡಿತ ಜನತೆಗಳ ಸ್ವಯಂ ನಿರ್ಣಯಾಧಿಕಾರದ ಮತ್ತು ವಿಮೋಚನೆಯ ಬಗ್ಗೆ ಕಾರ್ಮಿಕರ ಮತ್ತು ರೈತರ ಪ್ರಜಾತಂತ್ರವು ಘೋಷಿಸಿದ ಸೂತ್ರಗಳಿಗೆ, ತಮ್ಮ ಸ್ವಾತಂತ್ರ್ಯದ ಸಲುವಾಗಿ ವೀರೋಚಿತ ಹೋರಾಟವನ್ನು ನಡೆಸುತ್ತಿದ್ದ ವರ್ಗ ಜಾಗೃತ ಭಾರತೀಯರ ಕಡೆಯಿಂದ ದೊರೆತ ಸ್ವಾಗತವನ್ನು ಕೇಳಿ ಸಂತಸಿತರಾದುದಾಗಿ ಬರೆದಿದ್ದರು.

ಅಂದಿನಿಂದ ಇದುವರೆಗೆ ಅನೇಕ ವರ್ಷಗಳು ಕಳೆದಿವೆ. ವಸಾಹತು ಭಾರತವು ಈಗ ಉಳಿದಿಲ್ಲ. ಮಹತ್ತರವಾದ ವಿಮುಕ್ತ ಭಾರತ ದೇಶವು ಆ ಸ್ಥಾನಕ್ಕೆ ಬಂದಿದೆ. ದೃಢವಾದ ಸೋವಿಯತ್—ಭಾರತೀಯ ಮೈತ್ರಿಯ ಬಗ್ಗೆ ಲೆನಿನ್ನರು ಕಂಡ ಕನಸು ಇಂದು ನಿಜವಾಗಿದೆ. —'ತಾಸ್'

ತಿದ್ದುಪಡಿ

ಕಳೆದ ವಾರದ ಸಂಚಿಕೆಯಲ್ಲಿ 'ಕ್ರಾಂತಿಪುರುಷ ಲೆನಿನ್ನರ 78 ನೆಯ ಜನ್ಮದಿನ' ಎಂದು ತಪ್ಪಾಗಿ ಅಚ್ಚಾಗಿದೆ, ಅದನ್ನು '88ನೆಯ ಜನ್ಮದಿನ' ಎಂದು ತಿದ್ದಿಕೊಳ್ಳಬೇಕು ಮತ್ತು ಬ್ಲಾಕಿನ ಕೆಳಗೆ ಲೆನಿನ್‌ರ ಜನನ ಏಪ್ರಿಲ್ 21 1880 ಎಂದಿದೆ ಅದನ್ನು 1870 ಎಂದು ತಿದ್ದಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇವೆ. ಇದಕ್ಕೆ ಓದುಗರ ಕ್ಷಮೆಯನ್ನು ಕೋರುತ್ತೇವೆ —ಸಂ.

ಓದುಗರ ಓಲೆ

ಸರಕಾರದ ಗಮನಕ್ಕೆ

ಇನಾಂ ಗ್ರಾಮಗಳನ್ನು ಸರಕಾರದ ವಶಕ್ಕೆ ರೈತರಿಗೆ ಹಂಚಲು ಕ್ರಮ ತೆಗೆದುಕೊಳ್ಳದೆ ಮಧುಗಿರಿ ತಾಲ್ಲೂಕ್ ಸುದ್ದೇಕುಂಟೆ ಮತ್ತು ಜೋಡಿ ನಾಗೇನಹಳ್ಳಿಯಲ್ಲಿ ಅನೇಕ ಜೋಡಿದಾರರು ಮತ್ತು ದೊಡ್ಡ ಜಮೀನುದಾರರು ರೈತರ ಮೇಲೆ ಬಲತ್ಕಾರ ನಡೆಸುತ್ತಿದ್ದಾರೆ. ರೈತರು ಬೆಳೆದ ಮರಮುಟ್ಟುಗಳನ್ನು ಜಮೀನುದಾರರು ಮತ್ತು ಜೋಡಿದಾರರು ಅಕ್ರಮವಾಗಿ ಕಡಿದು ಸಾಗಿಸುತ್ತಿದ್ದಾರೆ. ಇದನ್ನ ಸರಕಾರದ ಗಮನಕ್ಕೆ ತಂದರೂ ಸರಕಾರ ಗಮನಿಸುವುದಿಲ್ಲ. ಸರಕಾರದ ವಶದಲ್ಲಿ ಇರುವ ಬಂಜರು ಜಮೀನುಗಳನ್ನು ಜಮೀನಿಲ್ಲದ ಕೂಲಿಗಾರರಿಗೂ ಮತ್ತು ಬಡ ರೈತರಿಗೂ ಹಂಚಲು ಸರಕಾರ ಕ್ರಮ ವಹಿಸುವುದಿಲ್ಲ. ಅದರ ಬದಲು ಅಂಥ ಜಮೀನುಗಳನ್ನು ಬೇರೆ ಬೇರೆ ನಗರಗಳಿಂದ ಹಳ್ಳಿಯ ಶ್ಯಾನುಭೋಗರು ಮತ್ತು ಪಟೇಲರು ದೊಡ್ಡ ದೊಡ್ಡ ಜಮೀನುದಾರರುಗಳಿಂದ ಲಂಚವನ್ನು ಪಡೆದು ಅವರಿಗೆ ಕೊಡುತ್ತಿದ್ದಾರೆ. ತಾಲ್ಲೂಕ್ ಮುಖ್ಯ ಅಧಿಕಾರಿಗಳೆ ಆಗಲಿ ಹಳ್ಳಿಗಳಿಂದ ಓಟುಗಳನ್ನು ಗಳಿಸಿದ ಎಂ. ಎಲ್. ಎ. ಅಥವ ಎಂ. ಪಿ. ಗಳೇ ಆಗಲಿ ಗಮನಿಸದೆ ಬಡ ರೈತರನ್ನು ನಾಶ ಪಡಿಸುತ್ತಿದ್ದಾರೆ. ಇದಕ್ಕೆ ತಕ್ಕ ಅಧಿಕಾರಿಗಳು ಬೇಗನೆ ಗಮನ ಕೊಟ್ಟು ಮುಂದಿನ ಕ್ರಮವನ್ನು ಕೈಗೊಳ್ಳುತ್ತಾರೆಂದು ನಂಬಿರುತ್ತೇವೆ.

"ನೊಂದವ" ಸುದ್ದೇಕುಂಟೆ

(ಹಿನೇ ಪುಟದಿಂದ)

ನನ್ನ ಮೊದಲ ದಿನಗಳು

ನಂತರ ಕಾಮ್ರೇಡ್ ಎಸ್. ವಿ. ಘಾಟೆ ಮತ್ತು ಜಾನಕಿ ಪ್ರಸಾದ್ ಬಗೇರಥ ರವರು ಅದರ ಜಂಟಿ ಕಾರ್ಯದರ್ಶಿಗಳಾದರು. 1927ರಲ್ಲಿ ಜಾನಕಿ ಪ್ರಸಾದರ ನಡವಳಿಕೆ ಬಗ್ಗೆ ನಮಗೆ ಅನುಮಾನ ಉಂಟಾಯಿತು ಮತ್ತು ಅದಕ್ಕೆ ಸಾಕಷ್ಟು ಕಾರಣಗಳೂ ಇದ್ದುವು. ನಾವು ಅವನನ್ನು ಇನ್ನು ನಂಬಲಾರೆವು ಎಂದು ತಿಳಿದು ಬಂದನಂತರ ತಾನಾಗಿಯೇ ಅತ ನಮ್ಮನ್ನು ತ್ಯಜಿಸಿದ. ಅವನು ಹೋದನಂತರ ಕಾಮ್ರೇಡ್ ಎಸ್. ವಿ. ಘಾಟೆ ಪ್ರಧಾನ ಕಾರ್ಯದರ್ಶಿಯಾದರು. 1929ರ ಮೇ 20ರವರೆಗೆ ಅವರು ಆಸ್ಥಾನದಲ್ಲಿದ್ದರು. ಅದಾದ ಬಹುಕಾಲದ ಮೇಲೆ ಅವರು ಮತ್ತೆ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1926 ರಿಂದ 1929 ರವರೆಗೆ ಕೇಂದ್ರ ಸಮಿತಿಯ ಅನೇಕ ಸಭೆಗಳು ಗುಪ್ತವಾಗಿ ಸಮಾವೇಶಗೊಂಡುವು. ಕೆಲವು ವರ್ಷಗಳು ಕೇಂದ್ರ ಸಮಿತಿಯು ವರ್ಷಕ್ಕೆ ನಾಲ್ಕು ಬಾರಿ ಸೇರಿದ್ದಿತು. 1928ರ ಅಕ್ಟೋಬರ್ ತಿಂಗಳಲ್ಲಿ ಮುಂಬಯಿಯಲ್ಲಿ ನಡೆದ ನಮ್ಮ ಕೇಂದ್ರ ಸಮಿತಿ ಸಭೆಯನ್ನು ಮೀರತ್ ಸೆಷನ್ಸ್‌ನ್ಯಾಯಾಧೀಶರು "ಯುದ್ಧ ಸಮಾಲೋಚನೆ" ಎಂದು ಯಾಕೆ ಕರೆದರೆಂದು ನನಗೆ ಗೊತ್ತಿಲ್ಲ.

1927ರಲ್ಲಿ ಪಾರ್ಟಿಯ ಘಟನಾವಳಿಯನ್ನು ತಯಾರಿಸಲಾಯಿತು

—(ಮುಂದುವರಿಯುವುದು)—

ಸುದ್ದಿ ಸಂಗ್ರಹ

ಬೆಂಗಳೂರು

ಸಂಘ ಮುರಿಯಲು ಐ. ಎನ್. ಟಿ. ಯು. ಸಿ. ನಾಯಕರ ನೆರವು

ಮಾಗಡಿ ರೋಡಿನ ಉಕ್ಕಡ ಬಳಿ ಇರುವ ಸರಸ್ವತಿ ಐರನ್ ಫೌಂಡ್ರಿ, ಎಂಬ ಇಂಜಿನಿಯರಿಂಗ್ ಕಾರ್ಖಾನೆಯಲ್ಲಿ ಸುಮಾರು 100 ಜನ ಕಾರ್ಮಿಕರು, ಶೀಘ್ರ ಶೋಷಣೆಗೊಳಗಾಗಿದ್ದಾರೆ. ಫ್ಯಾಕ್ಟರಿ ಆಕ್ಟ್ ಮತ್ತು ಇತರ ಲೇಬರ್ ಕಾನೂನುಗಳನ್ನು ಬಹಿರಂಗವಾಗಿ ಉಲ್ಲಂಘಿಸಲಾಗುತ್ತಿದೆ.

ಈ ಪರಿಸ್ಥಿತಿಯಿಂದ ಪಾರಾಗಿ, ಕಾನೂನಿನ ಪ್ರಕಾರ ತಮ್ಮ ಕುಂದುಕೊರತೆಗಳನ್ನು ಹೋಗಲಾಡಿಸಿಕೊಳ್ಳಲು ಅಲ್ಲಿನ ಕಾರ್ಮಿಕರು ಇದೇ ತಿಂಗಳು ಬೆಂಗಳೂರು ಜಿಲ್ಲಾ ಇಂಜಿನಿಯರಿಂಗ್ ಕೆಲಸಗಾರರ ಸಂಘದ ಸದಸ್ಯರಾದರು. ಈ ಸುದ್ದಿ ಮಾಲೀಕರಿಗೆ ತಿಳಿದೊಡನೆಯೇ ತಾರೀಖು 10-4-58 ರಂದು ಕಾರ್ಮಿಕರನ್ನು ಕರೆದು ತಾವು ಸಂಘಕ್ಕೆ ಸೇರುವುದಿಲ್ಲವೆಂಬ ಮುಚ್ಚಳಿಕೆಯ ಮೇಲೆ ಬಲವಂತದಿಂದ ಕೆಲಸಗಾರರಿಂದ ರುಜು ಮಾಡಿಸಿಕೊಂಡರು. ಈ ರೀತಿ ರುಜುಮಾಡಲು ನಿರಾಕರಿಸಿದ ಕೆಲಸಗಾರರ ಮೇಲೆ ಮಾಲೀಕರ ಗೂಂಡಾಗಳು ಕೈ ಮಾಡಿದ್ದಾರೆ. ಅವರನ್ನು ಹೊಡೆದು ಬಲಾತ್ಕಾರದಿಂದ ಮುಚ್ಚಳಿಕೆ ಸಹಿ ಹಾಕಿಸಿ ಕೊಂಡಿದ್ದಾರೆ.

ಐ. ಎನ್. ಟಿ. ಯು. ಸಿ. ಮುಖಂಡ ಶ್ರೀ ಕೆಂಪಹನುಮಯ್ಯ ಎಂಬುವರು ಸಂಘವನ್ನು ಒಡೆಯಲು ಮಾಲೀಕರ ನೆರವಿಗೆ ಬಂದಿದ್ದಾರೆ. ಮಾಲೀಕರ ಭಯೋತ್ಪಾದಕ ಕಾರ್ಯಗಳ ಹಿನ್ನೆಲೆಯಲ್ಲಿ ಫೋರ್‌ಮನ್ ಆಂಥೋಣಿಯವರು ಕಾರ್ಮಿಕರನ್ನೆಲ್ಲಾ ಸಭೆ ಸೇರಿಸಿ ಶ್ರೀ ಕೆಂಪಹನುಮಯ್ಯನವರನ್ನು ಕರೆಸಿ ಐ.ಎನ್.ಟಿ.ಯು.ಸಿ ನೇತೃತ್ವದಲ್ಲಿ ಇನ್ನೊಂದು ಸಂಘವನ್ನು ಮಾಡಲು ಸಿದ್ಧಯಿಸಿದ್ದಾರೆ. ಇದು ಐ.ಎನ್.ಟಿ.ಯು.ಸಿ. ಯ ಸಂಘ ಮುರಿಯುವ ನೀತಿಯಾಗಿದೆ.

ಹೋಟೇಲು ಮತ್ತು ಕ್ಯಾಂಟೀನ್ ಕೆಲಸಗಾರರ ಸಭೆ

17-4-58ರಂದು ರಾತ್ರಿ 9 ಘಂಟೆಗೆ ಬೆಂಗಳೂರು ಜಿಲ್ಲಾ ಹೋಟೇಲ್ ಮತ್ತು ಕ್ಯಾಂಟೀನ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಚಿಕ್ಕಲಾಲ್‌ಬಾಗಿನಲ್ಲಿ ಹೋಟೇಲ್ ಕೆಲಸಗಾರರ ಬಹಿರಂಗ ಸಭೆ ಸೇರಿದ್ದಿತು. ಸಂಘದ ಅಧ್ಯಕ್ಷ ಶ್ರೀ ಐ. ಮಂದಾಸ್ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಎಲೆಕ್ಟ್ರಿಕ್ ಕಾರ್ಖಾನೆ ಕ್ಯಾಂಟೀನ್ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಎಂ. ಎಸ್. ರಾಮರಾವ್, ಶ್ರೀ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷ ಬೆಂಗಳೂರು ಸಿಲ್ಕ್ ಕೆಲಸಗಾರರ ಸಂಘ, ರಾಷ್ಟ್ರೀಯ ಹೋಟೇಲ್ ಕೆಲಸಗಾರರ ಸಂಘದ ಉಪ ಕಾರ್ಯದರ್ಶಿ ಶ್ರೀ ವಿ. ಗೋಪಾಲ ಪಂಡಿತ್ ಮುತ್ತಿತರು ಭಾಷಣ ಮಾಡಿದರು.

ಶೋಷಿತ ಮತ್ತು ಶೋಚನೀಯ ಪರಿಸ್ಥಿತಿಯಲ್ಲಿರುವ ಹೋಟೇಲ್ ಕಾರ್ಮಿಕರಿಗೆ ರಕ್ಷಣೆ ಈಯಲು ಸರ್ಕಾರದ ಕಾರ್ಮಿಕ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ಈ ಸಭೆ ಒತ್ತಾಯ ಪಡಿಸುತ್ತದೆ. ಕಾರ್ಮಿಕರ ಜೀವನದ ಸ್ಥಿತಿಗಳನ್ನು ಸುಧಾರಿಸಲು ಹಾಗು ಕೆಲಸದ ಭದ್ರತೆಯನ್ನು ಸ್ಥಿರಪಡಿಸಲು ಸೂಕ್ತ ಶಾಸನವನ್ನು ತರಬೇಕೆಂದು, ವೇಜ್‌ಬೋರ್ಡ್ ರಚನೆ ಮತ್ತು ಕನಿಷ್ಠ ಕೂಲಿ ಶಾಸನ ಅನ್ವಯ ಮಾಡಬೇಕೆಂದು ಸರ್ಕಾರವನ್ನು ಈ ಸಭೆ ಒತ್ತಾಯ ಪಡಿಸುತ್ತದೆ. ಇದಲ್ಲದೆ ಸಾಮಾಜಿಕ ಭದ್ರತಾ ಶಾಸನಗಳನ್ನು ಹೋಟೇಲ್ ಕೆಲಸಗಾರರಿಗೂ ಅನ್ವಯಿಸಬೇಕೆಂದು ಒತ್ತಾಯ ಮಾಡುತ್ತದೆ. ಮದ್ರಾಸ್ ಸರ್ಕಾರ ಹೋಟೇಲ್ ಕೆಲಸಗಾರರಿಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಕೆಲವು ಶಾಸನಗಳ ರೀತಿಯಲ್ಲಿ ನಮ್ಮ ಮೈಸೂರು ಸರ್ಕಾರವು ಜಾರಿಗೆ ತರಬೇಕೆಂದು ಈ ಸಭೆ ಒತ್ತಾಯ ಪಡಿಸುತ್ತದೆ ಎನ್ನುವ ನಿರ್ಣಯಗಳು ಅಂಗೀಕೃತವಾದುವು.

ಬಾಗಲಕೋಟೆಯಲ್ಲಿ

ಕಮ್ಯೂನಿಸ್ಟ್ ಪಾರ್ಟಿಯ ಶಾಖಾ ಕಛೇರಿಯ ಸ್ಥಾಪನೆ

13—4—58 ರಂದು ಪಾರ್ಟಿಯ ಮುಖಂಡತ್ವದಲ್ಲಿ ಕಾಂ॥ ಬಾಲಸಿಂಗ್ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯಲ್ಲಿ ವಲ್ಲಭಾಯಿ ಚೌಕದಲ್ಲಿ ಸಾರ್ವಜನಿಕರ ಸಭೆ ಜರುಗಿತು. ಸಭೆಯಲ್ಲಿ ಕಾಮ್ರೇಡ್ ಎನ್. ಕೆ. ಉಪಾಧ್ಯಾಯರು ಕೇರಳದ ಕಮ್ಯೂನಿಸ್ಟರ ಒಂದು ವರ್ಷದ ರಾಜ್ಯ ಕಾಂಗ್ರೇಸರ ಹತ್ತು ವರ್ಷಗಳ ಆಡಳಿತೆ ಬಗ್ಗೆ ಅಚಲಾತ್ಮಕವಾಗಿ ಮಾತನಾಡಿದರು. ಹಾಗು ಒಂದೇ ಒಂದು ಈ ವರ್ಷದಲ್ಲಿ ಸಾಧಿಸಿದ ಕೇರಳ ಕಮ್ಯೂನಿಸ್ಟ್ ಸರಕಾರದ ಪ್ರಗತಿಯನ್ನು ಜನತೆಗೆ ಮನದಟ್ಟಣೆ ಮಾಡಿಕೊಟ್ಟು ಕಮ್ಯೂನಿಸ್ಟ್ ಪಾರ್ಟಿಯು ನಿಜವಾಗಿ ಪ್ರಜಾ ಪ್ರಭುತ್ವಕ್ಕಾಗಿ ಹಾಗು ಜನತೆಯ ಉದ್ಧಾರಕ್ಕಾಗಿ ದುಡಿಯುವ ಪಕ್ಷ ಅದನ್ನು ಬಲಗೊಳಿಸಲು ಜನತೆಗೆ ವಿನಂತಿ ಮಾಡಿಕೊಂಡರು.

ಆ ಮೇಲೆ ಅಧ್ಯಕ್ಷತೆಯ ಸ್ಥಾನದಿಂದ ಕಾಂ॥ ಬಾಲಸಿಂಗ್ ಮಾಸ್ತರು ಮಾತನಾಡುತ್ತಾ ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಯುತಗೊಳಿಸಲು ಜನತೆಗೆ ವಿನಂತಿ ಮಾಡಿಕೊಂಡರು.

ಆ ಮೇಲೆ ಬಾಗಲಕೋಟೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಸಿಮೆಂಟ್ ಕೆಲಸಗಾರ ಸಲುವಾಗಿ ಹಾಗು ಮುನಿಸಿಪಾಲ್ಟಿ ಹಾಗು ಇನ್ನು ಅನೇಕ ಕೆಲಸಗಾರರ ಸಲುವಾಗಿ ದುಡಿಯುತ್ತಾ ಬಂದಿರುವುದನ್ನು ವಿವರಿಸಿದ್ದರು.

ಸಿಮೆಂಟ್ ಕೆಲಸಗಾರರಿಗಾದ ಅನ್ಯಾಯವನ್ನು ಖಂಡಿಸಿ ಸರಕಾರ ಅದರ ಕಡೆಗೆ ಬೇಗ ಲಕ್ಷ್ಯಕೊಟ್ಟು ಅವರ ಬೇಡಿಕೆಗಳನ್ನು ಕೊಡುವ ಬಗ್ಗೆ ಕೇಳಿಕೊಳ್ಳಲಾಯಿತು.

ಬಾಗಲಕೋಟೆ ಶಾಖಾ ಪಾರ್ಟಿ ಆಫೀಸನ್ನು ತೆರೆಯಲಾಯಿತು. ಹಾಗು ಪಾರ್ಟಿಯಲ್ಲಿ ಕೆಲವು ಹೊಸ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು.

ಪಾರ್ಟಿಯ ನಿಧಿಗೆ ಹೋಬಳಿ ಸಮಿತಿ

ತಾ॥ 20—4—58 ರಂದು ಶಿವಮೊಗ್ಗಾ ತಾಲ್ಲೋಕು ನಿಧಿಗೆ ಹೋಬಳಿ ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಸಭೆಯು ಬಿದರೆ ಗ್ರಾಮದಲ್ಲಿ ಸಮಾವೇಶಗೊಂಡಿತ್ತು ಶಿವಮೊಗ್ಗಾದ ಪಾರ್ಟಿ ಕಾರ್ಯಕರ್ತರಾದ ಎನ್. ಪಿ. ಗಂಗಾಧರ ನಾಯರ್ ವಿ. ಬಸವರಾಜ್, ಇವರುಗಳು ಸಭೆಯಲ್ಲಿ ಭಾಗವಹಿಸಿದ್ದರು.

ಈ ಕೆಳಕಂಡ ಹೋಬಳಿ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಶ್ರೀ. ವೈ. ಆರ್. ನಾಗರಾಜುರವರನ್ನು ಕಾರ್ಯದರ್ಶಿಯನ್ನಾಗಿಯೂ, ಸರ್ವಶ್ರೀ. ಎನ್. ಮೈಲಾರಿರಾವ್, ಡಿ. ಎಸ್. ಬಸವಪ್ಪ, ಎಸ್. ಮಂಜಪ್ಪ, ಮತ್ತು ಬಿ. ಎಸ್. ನವುಲಪ್ಪನವರೊನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು.

ಕೊನೆಯದಾಗಿ ಕಾರ್ಯದರ್ಶಿ ಶ್ರೀ. ವೈ. ಆರ್. ನಾಗರಾಜುರವರು ಸರ್ವರನ್ನು ವಂದಿಸಿ, ಸರ್ವರ ಸಹಕಾರ ಮತ್ತು ಬೆಂಬಲ ಕೋರಿ ಪಾರ್ಟಿಯನ್ನು ಬಲವಾಗಿ ಸಂಘಟಿಸಬೇಕೆಂದು ಮನವಿ ಮಾಡಿದರು.

ದಕ್ಷಿಣ ಕನ್ನಡ

ಮರೋಳಿ ಪಂಚಾಯತ್ ಬೋರ್ಡು ಚುನಾವಣೆ

ತಾ॥ 15—4—58 ರಂದು ನಡೆದ ಮರೋಳಿ ಪಂಚಾಯತ್ ಬೋರ್ಡು ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಮರೋಳಿ ಶಾಖೆಯ ಕಾರ್ಯದರ್ಶಿ ಕಾಂ॥ ಜನ್ನಪ್ಪನವರು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆರಿಸಿ ಬಂದಿರುತ್ತಾರೆ. ಶ್ರೀಗಳಾದ ಆನಂದ, ಚೆನ್ನಯ್ಯ, ನರ್ಸಪ್ಪ, ನೇಂಕಪ್ಪ, ಅಮ್ಮಣ್ಣ, ರಾಮು ಇವರು ಬಹುಮತದಿಂದ ಸದಸ್ಯರಾಗಿ ಆರಿಸಿ ಬಂದಿರುತ್ತಾರೆ.

ಬೆಂಗಳೂರು

ಭಾರತ-ಚೀಣಾ ಸ್ನೇಹ ಸಂಘದ ಕಾರ್ಯದರ್ಶಿ ಚೀಣಾಕ್ಕೆ

ಭಾರತ—ಚೀಣಾ ಸ್ನೇಹ ಸಂಘದ ಕಾರ್ಯದರ್ಶಿ ಶ್ರೀ ಎ. ಎಸ್. ವಸಿಷ್ಟರು ಕಳೆದ ಭಾನುವಾರ ಚೀಣಕ್ಕೆ ತೆರಳಿದರು. ಮುಂದಿನ ವಾರದಲ್ಲಿ ಭಾರತ—ಚೀಣಾ ಸ್ನೇಹ ಸಂಘದ ಪರವಾಗಿ ಹತ್ತು ಮಂದಿಯ ನಿಯೋಗವೊಂದು ಚೀಣದಲ್ಲಿ ಮೂರು ವಾರಗಳ ಕಾಲ ಪ್ರವಾಸ ಮಾಡಲಿದೆ. ಶ್ರೀ ವಸಿಷ್ಟರು ಈ ನಿಯೋಗದ ಸದಸ್ಯರಲ್ಲೊಬ್ಬರಾಗಿದ್ದಾರೆ.

ಶ್ರೀ ವಸಿಷ್ಟರವರಿಗೆ ಸುಖಪ್ರಯಾಣ ಕೋರಲು ಬಂಧುಗಳು ಮತ್ತು ಮಿತ್ರರು ರೈಲ್ವೆ ನಿಲ್ದಾಣದಲ್ಲಿ ಆಗಮಿಸಿದ್ದರು. ಶ್ರೀಯುತರ ಚೀಣಾ ಪ್ರವಾಸವು ಬೆಂಗಳೂರಿನ ಭಾರತ—ಚೀಣಾ ಮೈತ್ರಿ ಸಂಘದ ಚಟುವಟಿಕೆಗಳು ಬೆಳೆಯಲು ಸಹಾಯಕವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಅವರ ಪ್ರವಾಸವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಉತ್ತರ ತಾಲ್ಲೂಕು ರೈತರ ಸಮ್ಮೇಳನ

ಬೆಂಗಳೂರು ಉತ್ತರ ತಾಲ್ಲೂಕು ರೈತ ಸಮ್ಮೇಳನವು ಏಪ್ರಿಲ್ 28ರಂದು ಯಶವಂತಪುರ ಹೋಬಳಿಯಲ್ಲಿ ಜರುಗಲಿದೆ. ಈ ಸಮ್ಮೇಳನದ ಉದ್ಘಾಟನೆಯನ್ನು ರೈತ ನಾಯಕರೂ, ಶಾಸನ ಸಭಾ ಸದಸ್ಯರೂ ಆದ ಶ್ರೀ ಟಿ. ಕೆ. ಗಂಗಿ ರೆಡ್ಡಿಯವರು ಉದ್ಘಾಟಿಸುವರು. ಸಮ್ಮೇಳನದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಶ್ರೀ ಪಿ. ವೆಂಕಟಗಿರಿಯಪ್ಪ ಇವರು ವಹಿಸುವರು. ಪ್ರಥಮವಾಗಿ ನಡೆಯುತ್ತಿರುವ ಈ ರೈತ ಸಮ್ಮೇಳನಕ್ಕೆ ತಾಲ್ಲೂಕಿನ ಎಲ್ಲ ಹಳ್ಳಿಗಳಿಂದಲೂ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ.

ತರಕಾರಿ ಮತ್ತು ಹಣ್ಣು ವ್ಯಾಪಾರಿಗಳ ಹರತಾಳ

ಮಾರ್ಕೆಟ್ಟಿನ ತರಕಾರಿ ಮತ್ತು ಹಣ್ಣು ಮಾರುವ ಅಂಗಡಿಗಳವರು ಏಪ್ರಿಲ್ ೨೦ ರಂದ ಸೇಲ್ಸ್ ಟ್ಯಾಕ್ಸ್ ಹಾಕಿರುವುದರ ವಿರುದ್ಧ ಹರತಾಳವನ್ನಾಚರಿಸಿದರು. ಎಲ್ಲ ಅಂಗಡಿಗಳ ಮೇಲೂ ಸರಕಾರವು ಟರ್ನೋವರ್ ಹಾಕಿರುವುದನ್ನು ಪ್ರತಿಭಟಿಸಲು ಈ ಹರತಾಳ ಆಚರಿಸಲಾಯಿತು. ಹರತಾಳವು ಯಶಸ್ವಿಯಾಗಿ ನಡೆದು ಯಾವ ಅಂಗಡಿಗಳೂ ಮಾರ್ಕೆಟ್ಟಿನಲ್ಲಿ ಅಂದು ತೆರೆದಿರಲಿಲ್ಲ.

ಒರಿಸ್ಸಾ

ಕಾಂಗ್ರೆಸ್ ಪಕ್ಷಕ್ಕೆ ಶಾಸನ ಸಭಾ ಸದಸ್ಯರ ರಾಜಿನಾಮೆ

ಕಳೆದ ಚುನಾವಣೆಯಲ್ಲಿ ಗಣತಂತ್ರ ಪರಿಷತ್ತಿನ ಬೆಂಬಲದಿಂದ ಆರಿಸಿಬಂದು ಕಾಂಗ್ರೆಸ್ ಶಾಸನಸಭಾ ಪಕ್ಷಕ್ಕೆ ಸೇರಿಕೊಂಡಿದ್ದ ಶ್ರೀ ಲಾಲ್ ವಿಕ್ರೋದಯ ಸಿಂಗ್ ಬಾರಿಹಾರರವರು ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆಯಿತ್ತಿದ್ದಾರೆ,

ರಾಜಿನಾಮೆಯ ಬಗ್ಗೆ ಅವರು ಇತ್ತಿರುವ ಹೇಳಿಕೆಯಲ್ಲಿ ಕಾಂಗ್ರೆಸ್ಸು ಲಂಚಖೂಡು ವತ್ತುಗಳಿಂದ, ಅಧಿಕಾರ ಲಾಲಸೆಯಿಂದ, ಒಳಜಗಳಗಳಿಂದ ತುಂಬಿದೆ ಎಂದು ತಮಗೆ ಬೇಸರಬಂದು ಪಕ್ಷವನ್ನು ತ್ಯಜಿಸಿರುವುದಾಗಿಯೂ ತಿಳಿಸಿದ್ದಾರೆ.

ಅಧಿಕ ತೆರಿಗೆ ಹೊರಿಸಿರುವ ಬೆಂಗಳೂರು ಕಾರ್ಪೊರೇಷನ್ ಬಜೆಟ್ಟು

ಎರಡು ಕೋಟಿ ರೂ. ಆಯ ವ್ಯಯದ ಬೆಂಗಳೂರು ಕಾರ್ಪೊರೇಶನ್ ಬಜೆಟ್ ಸಭೆಯ ಮುಂದೆ ಏಪ್ರಿಲ್ 22ರಂದು ಮಂಡನೆಯಾಗಿದೆ. ಈ ವರ್ಷದ ಬಜೆಟ್ಟಿನಲ್ಲಿರುವ ವಿಶೇಷತೆಯೆಂದರೆ ಅಧಿಕ ತೆರಿಗೆ ಹೊರಿಸಿರುವುದಾಗಿದೆ. ಈಗಾಗಲೇ ಕೇಂದ್ರ ಸರಕಾರದ ತೆರಿಗೆ, ರಾಜ್ಯ ಸರಕಾರದ ತೆರಿಗೆಯಿಂದ ಪರಿತಪಿಸುತ್ತಿರುವ ನಗರದ ಜನತೆಯ ಮೇಲೆ ಕಾರ್ಪೊರೇಷನ್ ಬೇರೆ ತೆರಿಗೆಯನ್ನು ಅಧಿಕಗೊಳಿಸಿದೆ. ಮನೆ ಕಂದಾಯವನ್ನು ಶೇ| ೧೧ರಷ್ಟು, ಅಕ್ಷಾಯಿ, ವಿದ್ಯುಚ್ಛಕ್ತಿ ಸುಂಕ ಇತ್ಯಾದಿ ಆರು ಬಾಬುಗಳಲ್ಲಿ ಹೆಚ್ಚುವರಿ ಮಾಡಲಾಗಿದೆ.

1958—59ರ ಸಾಲಿನ ಬಜೆಟ್ಟನ್ನು ಮಂಡಿಸಿದ ಹಣಕಾಸಿನ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಜೀನಾಭಾಯಿ ದೇವಿದಾಸ್‌ರವರು ಪೌರರಿಗೆ ಸೌಕರ್ಯಗಳನ್ನು ಒದಗಿಸಬೇಕಾದರೆ ಹೆಚ್ಚಿನ ತೆರಿಗೆ ಹಾಕದೆ ವಿಧಿಯಿಲ್ಲ ಎನ್ನುವ ಪರಿಸ್ಥಿತಿಯೇ ಕಾರಣವಾಗಿವೆ ಎಂದು ಹೇಳಿದ್ದಾರೆ. ಈ ಹೆಚ್ಚಿನ ಸೌಕರ್ಯಗಳು ಏನೆಂಬುದು ಮಾತ್ರ ಯಾರಿಗೂ ತಿಳಿದಿಲ್ಲ. ಬೆಂಗಳೂರು ನಗರದಲ್ಲಿ ಹೊಸ ಹೊಸ ಬಡಾವಣೆಗಳು ಉದ್ಭವಿಸಿ, ಜನಸಂಖ್ಯೆಯು ಹೆಚ್ಚಾಗುತ್ತಿದ್ದಂತೆ ಕಾರ್ಪೊರೇಷನ್ನಿನ ಆದಾಯವೂ ಹೆಚ್ಚಾಗಿದೆ. ಪೌರರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ, ಅಧಿಕ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದರ ಬದಲು ಆಡಳಿತ ಹೊಸ ತೆರಿಗೆ ಹಾಕಿರುವುದು ಖಂಡನೀಯವಾಗಿದೆ. ಕಾರ್ಪೊರೇಷನ್ನಿನ ಒಟ್ಟು ಆದಾಯ ರೂ. 2,09,37,900 ಆಗಿದೆ, ಖರ್ಚು 2,07,64,000 ರೂ.ಗಳಾಗಿವೆ. ಕಾರ್ಪೊರೇಷನ್ ಪೌರರಿಗೆ ಒದಗಿಸುತ್ತಿರುವ ಸೌಲಭ್ಯಗಳು ಶೋಚನೀಯವಾಗಿದೆ. ನೀರಿನ ವ್ಯವಸ್ಥೆ ಚಿಂತಾಜನಕವಾಗಿದೆ. ನಗರ ನೈರ್ಮಲ್ಯ ದಿನೇ ದಿನೇ ಹದಗೆಡುತ್ತಿದೆ. ಕಾರ್ಪೊರೇಷನ್ ಆಡಳಿತೆಯಲ್ಲಿರುವ ರಸ್ತೆಗಳು ದುರುಸ್ತಿಯಾಗುವುದೇ ಇಲ್ಲವಾಗಿದೆ. ಸುಂದರವಾದ ನಗರ, ಉದ್ಯಾನಗಳ ನಗರ, ಇದನ್ನು ಕಾಪಾಡಬೇಕು ಎಂದೆಲ್ಲ ಹೇಳುತ್ತಿದ್ದರೂ ಸಹ ಆ ಹೆಸರನ್ನುಳಿಸಿಕೊಳ್ಳಲು ಅತ್ಯಲ್ಪ ಕೆಲಸ ಮಾಡಲಾಗುತ್ತಿದೆ. ಎಲ್ಲ ಕಾರ್ಯಗಳಿಗೂ ಹಣವಿಲ್ಲ, ಕಾರ್ಪೊರೇಷನ್ನಿನ ವರಮಾನ ಜಾಸ್ತಿಯಾಗಿಲ್ಲ ಎಂದು ಆಡಳಿತಗಾರರು ಹೇಳುತ್ತಾ ಬರುತ್ತಾರೆ. ಆದರೆ ತೆರಿಗೆ ಬಾಕಿಯ ವಸೂಲಿಯಲ್ಲಿ ಮಾತ್ರ ಕಾರ್ಪೊರೇಷನ್ ಬಹಳ ಹಿಂದುಳಿದಿದೆ. ರೆವೆನ್ಯೂ ತೆರಿಗೆ, ಮತ್ತಿತರ ತೆರಿಗೆಗಳ ವಸೂಲಿ ಸರಿಯಾಗಿ ನಡೆಯುತ್ತಿಲ್ಲ. ಪ್ರತಿ ವರ್ಷವೂ ಅದು ಬಾಕಿ ನಿಂತಿದ್ದು ಬೆಳೆಯುತ್ತಿರುತ್ತದೆ.

ಸರಕಾರದ ಅಡ್ಡಿ

ಕಾರ್ಪೊರೇಷನ್ ವ್ಯವಹಾರಗಳಿಗೆ ಸರಕಾರದ ಅಡ್ಡಿ ಬಹಳವಾಗಿದೆ. ಮೊದಲನೆಯ ಅಡ್ಡಿ ಎಂದರೆ, ಕಾರ್ಪೊರೇಷನ್ ಸ್ವಾಯತ್ತ ಸಂಸ್ಥೆಯಾಗಿಲ್ಲದಿರುವುದು. ಇದರಿಂದಾಗಿ ಕಾರ್ಪೊರೇಷನ್ ಸಭೆ ಕೆಲವು ಬಾರಿ ಒಳ್ಳೆಯ ತೀರ್ಮಾನಗಳನ್ನು ತೆಗೆದುಕೊಂಡರೂ ಅದನ್ನು ಸರಕಾರ ತಳ್ಳಿ ಹಾಕುವುದು. ಜನತೆಯ ಒತ್ತಾಯಕ್ಕೆ ತಲೆಬಾಗಿ ಕಳೆದ ವರ್ಷ ಸೈಕಲ್ ತೆರಿಗೆ ರದ್ದು ಮಾಡಲು ಕಾರ್ಪೊರೇಷನ್ನಿನ ಶಿಫಾರಸನ್ನು ಸರಕಾರ ತಳ್ಳಿ ಹಾಕಿತು.

ಎರಡನೆಯದು ಸರಕಾರ ಕಾರ್ಪೊರೇಷನ್ನಿಗೆ ಕೊಡಬೇಕಾಗಿರುವ ಗ್ರಾಂಟು, ತೆರಿಗೆಯ ಬಾಕಿಗಳನ್ನು ಸಲ್ಲಿಸದಿರುವುದು. ವರ್ಷೇ ವರ್ಷೇ ಕಾರ್ಪೊರೇಷನ್ ಬಜೆಟ್ಟಿನಲ್ಲಿ ಈ ಅಂಶವನ್ನು ಒತ್ತಿ ಹೇಳಲಾಗುತ್ತಿದೆ. ಆದರೆ ಸರಕಾರ ಮಾತ್ರ ಇದಕ್ಕೆ ಗಮನ ಕೊಡದೆ ಸುಮ್ಮನೆ ಕುಳಿತಿದೆ. ಸರಕಾರವು ಕಾರ್ಪೊರೇಷನ್ನಿಗೆ ಈ ವರೆಗೆ 10,51,563 ರೂಪಾಯಿಗಳನ್ನು ಬಾಕಿ ತೆರಬೇಕಾಗಿದೆ. ಬಜೆಟ್ ಭಾಷಣ ಮಾಡಿದ ಜೀನಾಭಾಯ್ ದೇವಿದಾಸ್‌ರವರು "ಸರಕಾರಕ್ಕೆ ಕಾರ್ಪೊರೇಷನ್ನಿನ ಪ್ರಕೃತ ಪರಿಸ್ಥಿತಿ ಚೆನ್ನಾಗಿ ತಿಳಿದಿದೆ. ಆದ್ದರಿಂದ ಅವರು ವಿಳಂಬ ಮಾಡದೆ ಹಿಂತೆಗೆಯದೆ ನಮಗೆ ಸಲ್ಲಬೇಕಾದ ಬಾಕಿಯನ್ನು ಕೂಡಲೇ ಸಲ್ಲಿಸುವರೆಂದು ಭರವಸೆಯಿಡುತ್ತೇನೆ. ಹೀಗಾದರೆ ಮಾತ್ರವೇ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವುದು ಸಾಧ್ಯ" ಎಂದು ಹೇಳಿದ್ದಾರೆ.

ಸರಕಾರವು ಈ ವಿಷಯದಲ್ಲಿ ಮಾದರಿಯಾಗಿರುವುದರ ಬದಲು, ತದ್ವಿರುದ್ಧವಾಗಿ ವರ್ತಿಸುತ್ತಿದೆ. ಸರಕಾರದಿಂದ ಬರಬೇಕಾಗಿರುವ ಈ ಬಾಕಿಯನ್ನು ವಸೂಲಿ ಮಾಡಲು ಕಾರ್ಪೊರೇಷನ್ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದು ಅಗತ್ಯವಾಗಿದೆ.

ತೆರಿಗೆಯ ಅಂಶಗಳು

ಮನೆಗಂದಾಯ ಮತ್ತು ದೀಪದ ತೆರಿಗೆಯನ್ನು ಹೆಚ್ಚಿಸಿರುವುದು ಮತ್ತು ಅಕ್ಷಾಯಿ ಬಾಬಿನಲ್ಲಿ ಸುಂಕ ಹೆಚ್ಚಿಸಿರುವುದು ಸಾಮಾನ್ಯರಿಗೆ ಬಾಧಿಸುತ್ತದೆ.

ಆದರೆ ಖಾಲಿ ನಿವೇಶನಗಳ ಮೇಲೆ ಕಂದಾಯವನ್ನು ಹೆಚ್ಚಿಸಿರುವುದು ಸ್ವಾಗತಾರ್ಹವಾದುದಾಗಿದೆ ಎಂದು ಹೇಳಬಹುದು. ಇದರಿಂದ ಖಾಲಿ ನಿವೇಶನಗಳನ್ನು ಮನೆ ಕಟ್ಟದೆ ಹಾಗೇ ವರ್ಷಗಟ್ಟಲೆ ಉಳಿಸಿಕೊಂಡು ದಳ್ಳಾಳಿ ವ್ಯಾಪಾರ ಮಾಡುತ್ತಿರುವುದಕ್ಕೆ ಸ್ವಲ್ಪವಾದರೂ ತಡೆಯಾಗಬಹುದು ಮತ್ತು ಕಾರ್ಪೊರೇಷನ್ನಿಗೆ ಅಧಿಕ ವರಮಾನವೂ ಬರುವುದು.

ಮಿಲಿಟರಿಗೆ ಒದಗಿಸುತ್ತಿರುವ ನೀರಿನ ಮೇಲೆ ಮತ್ತು ರೈಲ್ವೆಗೆ ಒದಗಿಸುತ್ತಿರುವ ನೀರಿನ ಮೇಲೆ, ಹಾಕಲಾಗಿರುವ ಅಧಿಕ ತೆರಿಗೆಯು ಸ್ವಾಗತಾರ್ಹವಾಗಿದೆ. ಕಾರ್ಪೊರೇಷನ್ ಇದನ್ನು ವಸೂಲಿ ಮಾಡಿಕೊಳ್ಳಬೇಕು ಅಷ್ಟೆ.

ದೇವಿಕುಲಂ ಕ್ಷೇತ್ರದ ಉಪಚುನಾವಣೆ

(೬ನೇ ಪುಟದಿಂದ)

ವಣೆಗಳಲ್ಲಿ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು 9662 ಅಧಿಕ ಮತ ಗಳಿಸಿ ಆಯ್ಕೆಯಾದರು. ಈ ಬಾರಿ ಇನ್ನೂ ಹೆಚ್ಚು ಮತ ಗಳಿಸುವುದರಲ್ಲಿ ಸಂಶಯವಿಲ್ಲ. ಕಮ್ಯೂನಿಸ್ಟ್ ಸರಕಾರ ಅಧಿಕಾರಕ್ಕೆ ಬಂದ ಎರಡು ತಿಂಗಳುಗಳ ಅವಧಿಯಲ್ಲಿಯೇ ಪ್ಲಾಂಟೇಶನ್ ಮಾಲಿಕರುಗಳು ಎರಡು ತಿಂಗಳ ಬೋನಸ್ಸನ್ನು ಕೆಲಸಗಾರರಿಗೆ ಕೊಡುವಂತೆ ಮಾಡಿತು. ಏಲಕ್ಕಿ ತೋಟದ ಕೆಲಸಗಾರರಿಗೆ (ಸುಮಾರು 10,000 ಕೆಲಸಗಾರರಿಗೆ) ಗಂಡಾಳಿಗೆ ರೂ. 1-72 ನ್ನೂ, ಹೆಂಗಸರಿಗೆ ರೂ. 1-31ನ್ನೂ ಕನಿಷ್ಟ ವೇತನ ನಿಗದಿ ಮಾಡಿತು. ಹೆರಿಗೆ ಸೌಲಭ್ಯಗಳ ಮಸೂದೆಯನ್ನೂ ಅಂಗೀಕರಿಸಿ ಜಾರಿಗೊಳಿಸಿತು. ಪ್ಲಾಂಟೇಷನ್ ಕೆಲಸಗಾರರಿಗೆ ನ್ಯಾಯವಾದ ಕೂಲಿ ನಿಗದಿ ಮಾಡಲು ಸಮಿತಿಯೊಂದಯನ್ನ ನೇಮಕ ಮಾಡಿದೆ. ಇವೆಲ್ಲಕ್ಕೂ ಮಿಗಿಲಾಗಿ ಸರಕಾರವು ಕೆಲಸಗಾರರ ಮೇಲೆ ದಬ್ಬಾಳಿಕೆ ನಡೆಸಲು ಮಾಲಿಕರ ಪರವಾಗಿ ಪೋಲೀಸು ಕಳಿಸುವುದನ್ನು ತಡೆದಿದೆ. ಇವೆಲ್ಲವೂ ಕೆಲಸಗಾರರ ನಡುವೆ ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ಅಭಿಮಾನವನ್ನು ಹೆಚ್ಚಿಸಿದೆ. ಚುನಾವಣೆಯ ಕಾರ್ಯವನ್ನು ಈಗಾಗಲೇ ಆರಂಭಿಸಲಾಗಿದೆ.

ನಗರಾಭಿವೃದ್ಧಿಗೆ ಹೆಚ್ಚಿನ ಗಮನ ಅಗತ್ಯ

ಮೈಸೂರು ರಾಜ್ಯದ ಕೇಂದ್ರವಾಗಿದ್ದ, ಔದ್ಯೋಗಿಕ ಕೇಂದ್ರವಾಗಿರುವ ಬೆಂಗಳೂರು ನಗರ ಶೀಘ್ರವಾಗಿ ಬೆಳೆಯುತ್ತಿದೆ. ಮುಂದಿನ ವರ್ಷಗಳಲ್ಲಿ ಇನ್ನೂ ಬೆಳೆಯುವುದರಲ್ಲಿ ಸಂಶಯವಿಲ್ಲ. ಆದರೆ ಕಾರ್ಪೊರೇಷನ್‌ನ ಕೆಲಸ ಕಾರ್ಯಗಳು ಮಾತ್ರ ಈ ಬೆಳವಣಿಗೆಗೆ ಸರಿಯಾಗಿಲ್ಲ. ಮಂದಗತಿಯಿಂದ ಆಡಳಿತ ಸಾಗುತ್ತಿದೆ. ನಗರಾಭಿವೃದ್ಧಿಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ. ಕೊಳಕು ಪ್ರದೇಶಗಳ ನಿರ್ಮಲೀಕರಣ, ಸರಿಯಾದ ನೀರು ಸರಬರಾಜಿನ ವ್ಯವಸ್ಥೆ ಮತ್ತು ರಸ್ತೆಗಳ ರಿಪೇರಿ ಅತ್ಯಂತ ಜರೂರು ಕಾರ್ಯವಾಗಿದೆ. ಕಾರ್ಪೊರೇಷನ್ ಸನ್ಮಾನ ಪತ್ರಗಳನ್ನು ಕೊಡುವ, ಸ್ವಾಗತ ಸಮಾರಂಭಗಳನ್ನು ಏರ್ಪಡಿಸುವ ಸಂಸ್ಥೆಯಾಗಿರದೆ ಮೇಲಿನ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲಿ. ಕಾರ್ಪೊರೇಷನ್ನಿನ ಸ್ವಾಯತ್ತತೆಗಾಗಿ ಶ್ರಮಿಸಲಿ. ಸರಕಾರದ ಹಿಡಿತವನ್ನು ಆದಷ್ಟು ತಪ್ಪಿಸಲಿ.

ಮೈಸೂರು ಮಂತ್ರಿ ಮಂಡಲದ ಬಿಕ್ಕಟ್ಟು ತೀವ್ರಗೊಂಡಿದೆ

ಕಳೆದ ಒಂದು ತಿಂಗಳಿಂದಲೂ ಒಳಜಗಳದಲ್ಲಿ ನಿರತರಾಗಿರುವ ಮೈಸೂರು ಮಂತ್ರಿ ಮಂಡಲದ ಬಿಕ್ಕಟ್ಟು ಇನ್ನೂ ಹೆಚ್ಚು ತೀವ್ರಗೊಂಡಿರುವುದೆಂದು ತಿಳಿದು ಬಂದಿದೆ. ನಿಜಲಿಂಗಪ್ಪನವರ ವಿರೋಧಿ ಗುಂಪು ಅವಿಶ್ವಾಸ ನಿರ್ಣಯದ ಬಗ್ಗೆ ತಮ್ಮ ನಿಲುವನ್ನು ಬದಲಿಸಿಲ್ಲವೆಂದೂ, ಒತ್ತಾಯ ಹೆಚ್ಚಾಗಿದೆಯೆಂದು ತಿಳಿದು ಬಂದಿದೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸಮಾವೇಶಕ್ಕೆ ಹೋಗಿದ್ದ ಸಾಹುಕಾರ ಚನ್ನಯ್ಯನವರು ಮತ್ತೆ ಕಾಂಗ್ರೆಸ್ ಹೈಕಮಾಂಡಿನೊಂದಿಗೆ ಪರಿಸ್ಥಿತಿ ಕುರಿತು ಚರ್ಚಿಸಿದ್ದಾರೆಂದೂ ತೀರ್ಮಾನವು ಬೇಗನೇ ಆಗುವುದೆಂದೂ ತಿಳಿದುಬಂದಿದೆ.

ಮೈಸೂರು ಕಾಂಗ್ರೆಸ್ಸಿನ ವ್ಯವಹಾರವನ್ನು ಕುರಿತು ಮುಖತಃ ಪರಿಶೀಲಿಸಲು ಕಾಂಗ್ರೆಸ್ ಹೈಕಮಾಂಡಿನ ಪರವಾಗಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಇಷ್ಟರಲ್ಲೇ ಬೆಂಗಳೂರಿಗೆ ಭೇಟಿಕೊಡುವುದಾಗಿ ತಿಳಿದುಬಂದಿದೆ. ಶ್ರೀಯುತರ ಆಗಮನದ ನಂತರ ಹೈಕಮಾಂಡ್ ಮುಂದಿನ ತೀರ್ಮಾನ ತೆಗೆದುಕೊಳ್ಳುವುದೆಂದು ತಿಳಿದು ಬಂದಿದೆ.

ಈ ಮಧ್ಯದಲ್ಲಿ ನಿಜಲಿಂಗಪ್ಪನವರ ವಿರೋಧಿಗಳ ಗುಂಪಿಗೆ ಇನ್ನಷ್ಟು ಸದಸ್ಯರು ಸೇರಿಕೊಂಡಿರುವರೆಂದೂ, ಅವಿಶ್ವಾಸ ನಿರ್ಣಯವು ಆದಷ್ಟು ಬೇಗ ಮಂಡಿತವಾಗುವುದೆಂದೂ ತಿಳಿದುಬಂದಿದೆ. ಮುಂದಿನ ವಾರದಲ್ಲಿ ಮಂತ್ರಿಮಂಡಲದ ಭವಿಷ್ಯದ ಬಗ್ಗೆ ತೀರ್ಮಾನವಾಗುವುದೆಂಬ ನಿರೀಕ್ಷೆ ಇದೆ.

— ಅಂತರರಾಷ್ಟ್ರೀಯ —

(೩ನೇ ಪುಟದಿಂದ)

ರ್ಥಿಕ ಕ್ಷೇತ್ರದಲ್ಲಿ ತಲೆದೋರಿರುವ ಮುಗ್ಗಟ್ಟಾಗಿದೆ. ಅಮೆರಿಕದ ಈ ಆರ್ಥಿಕ ಮುಗ್ಗಟ್ಟು ಇತರ ಅವಲಂಬಿತ ದೇಶಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರಿದೆ.

ಸೋವಿಯತ್ ಯೂನಿಯನ್ ಮೂರನೇ ಸ್ಪೂತ್ನಿಕ್ ಹಾರಿಸುವುದೇ?

ಕಳೆದ ವಾರ 'ಲೈಕ' ನಾಯಿಯನ್ನು ಹೊತ್ತಿದ್ದ ಸೋವಿಯತ್ ಯೂನಿಯನ್ನಿನ ಎರಡನೆಯ ಸ್ಪೂತ್ನಿಕ್ ಎರಡು ಭಾಗವಾಗಿ ಉರಿಯುತ್ತ ಭೂಮಿಗೆ ಬಿದ್ದಿತು. ಇದು ಭೂಮಂಡಲವನ್ನು 2,300 ಬಾರಿ ಸುತ್ತಿದೆ ಎಂದು ಸೋವಿಯತ್ ಪ್ರಕಟಣೆಯೊಂದು ತಿಳಿಸುತ್ತದೆ.

ಸೋವಿಯತ್ ಯೂನಿಯನಿನ ವಿಜ್ಞಾನಿಗಳು ಈಗ ಮೂರನೆಯ ಭೂ ಉಪಗ್ರಹವನ್ನು ಹಾರಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ತಿಳಿದು ಬಂದಿದೆ. ಇದು ಹಿಂದೆ ಹಾರಿಸಲಾಗಿದ್ದ ಎರಡು ಉಪಗ್ರಹಗಳಿಗಿಂತಲೂ ದೊಡ್ಡದಾಗಿರುವುದೆಂದೂ ಮತ್ತು ಇದೂ ಸಹ ಒಂದು ಸಜೀವ ಪ್ರಾಣಿಯನ್ನು ಹೊತ್ತಿರುವುದೆಂದೂ ತಿಳಿದು ಬಂದಿದೆ. ಆದರೆ 'ಮೂರನೆಯ ಸ್ಪೂತ್ನಿಕ್' ಯಾವಾಗ ಹಾರಿಸಲಾಗುವುದೆಂಬುದು ಇನ್ನು ನಿರ್ದಿಷ್ಟವಾಗಿಲ್ಲ.

ಪ್ರತಿಗಾಮಿ ಬಲ ಶಕ್ತಿಗಳ ಕೈವಾಡ

(ಮೊದಲನೇ ಪುಟದಿಂದ)

ಯೋಜನೆಯು ಬಿಕ್ಕಟ್ಟಿನಲ್ಲಿ ಸಿಲುಕಿರುವಾಗ, ಪ್ರಜಾಪ್ರಭುತ್ವಾತ್ಮಕ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಬೆಳವಣಿಗೆಯಿಂದ ಹೆದರಿರುವ ಈ ಪರಿಸ್ಥಿತಿಯಲ್ಲಿ ತೀವ್ರ ಪ್ರತಿಗಾಮಿ ಶಕ್ತಿಗಳು ತಮ್ಮ ಚಟುವಟಿಕೆಯನ್ನು ಬಲಪಡಿಸಿವೆ. ನಮ್ಮ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸಲು ಅಮೆರಿಕದ ಡಾಲ್ಲರ್ ಸಹಾಯವೊಂದೇ ದಾರಿ ಎಂದು ಪ್ರಚಾರ ಮಾಡುತ್ತಿವೆ. ಅದಕ್ಕೆ ಅನುಕೂಲವಾತಾವರಣ ಕಲ್ಪಿಸಬೇಕೆಂದು ಒತ್ತಾಯ ಪಡಿಸುತ್ತಿವೆ.

ಸಾರ್ವಜನಿಕ ಕ್ಷೇತ್ರದ ಮೇಲೆ ತೀವ್ರ ಅಪಪ್ರಚಾರ, ಗುತ್ತೇದಾರಿ ಭಂಡವಾಳಶಾಹಿಗಳಿಗೆ ಹೆಚ್ಚಿನ ಸವಲತ್ತುಗಳು ಬೇಕೆಂದು ಈ ಪ್ರತಿಗಾಮಿಗಳು ಒತ್ತಾಯ ಪಡಿಸುತ್ತೇವೆ. ರಷ್ಯ ಮತ್ತಿತರ ಸೋಷಲಿಸ್ಟ್ ರಾಷ್ಟ್ರಗಳೊಂದಿಗೆ ವ್ಯಾಪಾರ ಕಡಿಮೆಮಾಡಿ ಅಮೇರಿಕಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆನ್ನುತ್ತಿದೆ ಬಂಡವಾಳಶಾಹಿಗಳಿಗೆ ಅನುಕೂಲವಾಗುವಂತೆ ಕಾರ್ಮಿಕ ಶಾಸನಗಳನ್ನು ತಿದ್ದುಪಡಿ ಮಾಡಬೇಕೆಂದೂ ಅವರ ಒತ್ತಾಯವಿದೆ. ಭೂಸುಧಾರಣೆಯನ್ನಂತೂ ಅವರು ವಿರೋಧಿಸುತ್ತಾರೆ.

ಈ ಪ್ರತಿಗಾಮಿ ಶಕ್ತಿಗಳು ನಮ್ಮ ಆರ್ಥಿಕ ಜೀವನದಲ್ಲಿ ಭದ್ರವಾದ ಹಿಡಿತ ಇಟ್ಟುಕೊಂಡಿವೆ. ಕಾಂಗ್ರೆಸ್ ಮತ್ತು ಸಂಸ್ಕಾರಗಳ ಒಳಗೂ ಹೊರಗೂ ಅವರ ಬೆಂಬಲಿಗರೂ ಪ್ರತಿನಿಧಿಗಳೂ ಇದ್ದಾರೆ. ಉನ್ನತಾಧಿಕಾರಿಗಳಲ್ಲಿ ಹಲವರು ಅವರ ಸಹಾಯಕರಾಗಿದ್ದಾರೆ. ದೇಶದ ಹಲವು ದೊಡ್ಡ ಪತ್ರಿಕೆಗಳು ಅವರ ಹಿಡಿತದಲ್ಲಿವೆ.

ದೇಶದ ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಗೂ, ರಾಷ್ಟ್ರೀಯ ಆರ್ಥಿಕ ಜೀವನ ಮತ್ತು ಪ್ರಜಾಪ್ರಭುತ್ವಕ್ಕೂ, ಈ ಶಕ್ತಿಗಳ ವಿರುದ್ಧ ಹೋರಾಡುವುದು ಕಮ್ಯೂನಿಸ್ಟ್ ಪಾರ್ಟಿಯ ಕರ್ತವ್ಯ. ಈ ಶಕ್ತಿಗಳ ಬಗ್ಗೆ ಜನತೆಯನ್ನು ಎಚ್ಚರಿಸಿ ಅದರ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿಗಳನ್ನೂ ಒಂದುಗೂಡಿಸುವುದಗತ್ಯ.

ಪ್ರಗತಿಗಾಮಿ ಧೋರಣೆಗೆ ಹೋರಾಟ ಬಲಗೊಳಿಸಿರಿ

ಈ ಪ್ರತಿಗಾಮಿ ಶಕ್ತಿಗಳಿಗೆ ಕಾಂಗ್ರೆಸ್ಸಿನ ಹೊರಗೆ ಜಾತೀಯತೆಯ ಪ್ರಚಾರದಿಂದ ಮಾತ್ರ ಸ್ವಲ್ಪ ಬೆಂಬಲವಿದೆ. ಆದರೆ ನಿಜವಾದ ಹೆಚ್ಚಿನ ಬೆಂಬಲವಿರುವುದು ಅವರಿಗಿರುವ ಕಾಂಗ್ರೆಸ್ಸಿನೊಳಗಿನ ಪ್ರತಿಗಾಮಿಗಳಿಂದ, ಈ ಶಕ್ತಿಗಳೀಗ ಕಾಂಗ್ರೆಸ್ ಸಂಸ್ಥೆಯ ಮೇಲೂ ತನ್ನ ಹಿಡಿತವನ್ನು ಬಲಪಡಿಸಿಕೊಂಡಿವೆ. ಕಾಂಗ್ರೆಸ್ಸಿನ ಬಲಹೀನ ಮತ್ತು ಪ್ರತಿಗಾಮಿ ಧೋರಣೆಗಳಿಂದಲೇ ಈ ಶಕ್ತಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಈ ಪ್ರತಿಗಾಮಿ ಬಲಪಕ್ಷದ ಶಕ್ತಿಗಳನ್ನು ಸೋಲಿಸಲು ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಒಂದೇ ಸಮಯದಲ್ಲಿ ಹೋರಾಡುವುದು ಅಗತ್ಯ. ಈ ರೀತಿಯ ಎರಡು ಕಡೆಯ ಹೋರಾಟವಿಲ್ಲದಿದ್ದರೆ ಬಲ ಪಕ್ಷದ ಪ್ರತಿಗಾಮಿಗಳನ್ನು ಸೋಲಿಸಲಿಕ್ಕಾಗಲೀ ಅಥವಾ ಯೋಜನೆಯ ಗುರಿಯನ್ನು ಸಾಧಿಸಲಿಕ್ಕಾಗಲಿ ಸಾಧ್ಯವಿಲ್ಲ.

ಜನತೆಯ ಹಿತರಕ್ಷಿಸುವ ಯೋಜನೆಯ ಗುರಿಗಳನ್ನು ಸಾಧಿಸಲು ಕಮ್ಯೂನಿಸ್ಟ್ ಪಾರ್ಟಿ ಹೋರಾಡುತ್ತದೆ. ಸೋವಿಯತ್ ಯೂನಿಯನ್ ಮತ್ತಿತರ ಸಮಾಜವಾದಿ ರಾಷ್ಟ್ರಗಳೊಂದಿಗೆ ಹೆಚ್ಚು ವ್ಯವಹಾರ ನಡೆಸಲು ಒತ್ತಾಯಪಡಿಸುತ್ತದೆ. ಹದಿನೈದು ಅಂಶಗಳ ರಾಷ್ಟ್ರೀಯ ಚಳುವಳಿ ನಡೆಸಲು ಕರೆ ಕೊಡುತ್ತದೆ. [ಈ ಹದಿನೈದು ಅಂಶಗಳನ್ನು ಕಳೆದ ಸಂಚಿಕೆಯಲ್ಲಿ ಕೊಟ್ಟಿದ್ದೇವೆ.]

ಸಾಮೂಹಿಕ ಚಳುವಳಿ ಮತ್ತು ಸರ್ವಮುಖ ಚಟುವಟಿಕೆ

ತಮ್ಮ ಜೀವನ ಪರಿಸ್ಥಿತಿಯಲ್ಲಿ ಸುಧಾರಣೆಯಾಗಬೇಕೆಂಬ ಹಂಬಲ ಮತ್ತು ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಕಮ್ಯೂನಿಸ್ಟ್ ಪಾರ್ಟಿಯು ರಾಷ್ಟ್ರ ಪುನರ್ರಚನೆಗೆ ಹೋರಾಡುವುದು. ಪ್ರಗತಿಗಾಮಿ ಧೋರಣೆಗಳಿಗೆ ನಿರಂತರ ಪ್ರಚಾರ ಮಾಡುವಾಗ ಕಮ್ಯೂನಿಸ್ಟ್ ಪಾರ್ಟಿಯು ಕಾರ್ಮಿಕರ, ರೈತರ ಮಧ್ಯಮ ವರ್ಗದ ಮತ್ತಿತರ ವಿಭಾಗದ ಜನತೆಯ ಸಮಸ್ಯೆಗಳ ಬಗ್ಗೆ ಧೈರ್ಯದಿಂದ ಹೋರಾಡುವುದು. ಈ ಚಳುವಳಿ ಮತ್ತು ಹೋರಾಟಗಳು ಈಗಲೂ ಅತ್ಯಂತ ಮಹತ್ವದ್ದಾಗಿವೆ.

ಪ್ರತಿಯೊಬ್ಬ ಪಾರ್ಟಿ ಘಟಕವೂ, ಪಾರ್ಟಿ ಸದಸ್ಯನೂ ಬಹುಮುಖ ಚಟುವಟಿಕೆಯ ಮಹತ್ವವನ್ನು ಅರಿಯಬೇಕು. ಸಾಮಾಜಿಕ ಅಭಿವೃದ್ಧಿ ಸಂಸ್ಥೆಗಳಲ್ಲೂ, ಮಹಿಳಾ ಮತ್ತು ಯುವಕ ಸಂಸ್ಥೆಗಳಲ್ಲೂ ಭಾಗವಹಿಸಬೇಕು.

ಸಾಮೂಹಿಕ ರೈತ ಸಂಘ ಕಟ್ಟಿರಿ

ಎಲ್ಲ ಚಳುವಳಿ ಮತ್ತು ಹೋರಾಟಗಳನ್ನು ವಿಶಾಲವಾದ ಐಕ್ಯರಂಗದ ತಳಹದಿಯಲ್ಲಿ ನಡೆಸುವುದಗತ್ಯ. ಇಲ್ಲದಿದ್ದರೆ ಜನತೆಯಲ್ಲಿರುವ ಜಾಗೃತಿಯನ್ನು ಕ್ರೋಢೀಕರಿಸಲಾಗುವುದಿಲ್ಲ.

ಮುಖ್ಯವಾಗಿ ರೈತ ಸಂಘಟನೆಗೆ ಗಮನ ಕೊಡುವುದು ಅತ್ಯಗತ್ಯ. ಬಲವಾದ ರೈತ ಸಂಘಟನೆ ಇಲ್ಲದಿರುವುದು ನಮ್ಮ ಪ್ರಜಾಪ್ರಭುತ್ವ ಚಳುವಳಿಯ ದುರ್ಬಲತೆಯಾಗಿದೆ. ನಮ್ಮ ದೇಶದ ರಾಜಕೀಯ ಜೀವನದಲ್ಲಿ ನಾವು ಪ್ರಬಲ ಶಕ್ತಿಯಾಗಬೇಕಾದರೆ ಈ ದುರ್ಬಲತೆಯನ್ನು ನಿವಾರಿಸುವುದಗತ್ಯ.

ಕೇರಳ ದಾರಿತೋರಿಸುತ್ತಿದೆ

ಕೇರಳದಲ್ಲಿ ಕಮ್ಯೂನಿಸ್ಟ್ ನಾಯಕತ್ವದ ಸರಕಾರ ರಚನೆಯಾಗಿರುವುದು ಬಹಳ ಮಹತ್ವದ ಘಟನೆಯಾಗಿದೆ. ಕಮ್ಯೂನಿಸ್ಟ್ ಪಾರ್ಟಿಯು ಕೇರಳ ಸರಕಾರದ ಸಾಧನೆಗಳ ಬಗ್ಗೆ ತೀವ್ರವಾದ ಪ್ರಚಾರ ಕೈಗೊಳ್ಳಲು ನಿರ್ಧರಿಸುತ್ತದೆ. ಕೇರಳದಲ್ಲಿ ಆದ ಪ್ರಗತಿಯು ಇಡೀ ಪ್ರಜಾಪ್ರಭುತ್ವ ಚಳುವಳಿಯ ಪ್ರಗತಿಗೆ ತಳಹದಿಯಾಗಿ ಮಾಡಬಹುದು.

ಸಯುಕ್ತರಂಗವನ್ನು ಬಲಗೊಳಿಸಿ

ಕಮ್ಯೂನಿಸ್ಟ್ ಪಾರ್ಟಿಯು ತನ್ನ ಚಳುವಳಿಯನ್ನು ಬಲಪಡಿಸಲು ಐಕ್ಯರಂಗವನ್ನು ಕಟ್ಟಲು ಪ್ರಯತ್ನಿಸುವುದು. ಈ ಚಳುವಳಿಯಲ್ಲಿ ಎಡಪಕ್ಷಗಳ ಮತ್ತು ಪ್ರಗತಿಗಾಮಿ ಸ್ವತಂತ್ರರ ಐಕ್ಯರಂಗ ಮಹತ್ವದ್ದಾಗಿದೆ. ಇದನ್ನು ಬಲಗೊಳಿಸಿ ಹೋರಾಡಿದರೆ ಬೇಗನೇ ಕಾಂಗ್ರೆಸ್ ಗುತ್ತೇದಾರಿಯನ್ನು ಇನ್ನಿತರ ಕಡೆಗಳಲ್ಲೂ ಮುರಿಯಲು ಸಾಧ್ಯವಿದೆ. ಕೇರಳದಲ್ಲಿ ಆರಂಭವಾದ ಘಟನೆ ಇತರ ಕಡೆಗೂ ಹರಡಿ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರ ರಚನೆಯಾಗಲು ಸಾಧ್ಯವಿದೆ. ಈ ಸಾಧ್ಯತೆಯನ್ನು ಕಾರ್ಯಗತಗೊಳಿಸಲು ನಾವು ಪ್ರಯತ್ನಿಸುವೆವು.

ಎಡಪಕ್ಷಗಳ ಐಕ್ಯರಂಗ ಸುಲಭ ಸಾಧ್ಯವಲ್ಲ ಸೋಷಲಿಸ್ಟ್ ಪಿ.ಎಸ್.ಪಿ. ನಾಯಕತ್ವಗಳು ಜನತೆಯನ್ನು ವಿಭಜಿಸಿಡುವ ಧೋರಣೆಯನ್ನು ಅನುಸರಿಸುತ್ತಿವೆ. ಒರಿಸ್ಸಾ ಪಿ.ಎಸ್.ಪಿ.ಯು ಗಣತಂತ್ರ ಪರಿಷತ್ ಜೊತೆಗೂ, ಕೇರಳದಲ್ಲಿ ಅವರು ರೋಮನ್ ಕಾಥೊಲಿಕ್ ಅವರ ಜೊತೆಗೂ ಸೇರಿ ಪ್ರತಿಗಾಮಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಇದನ್ನು ಕಮ್ಯೂನಿಸ್ಟ್ ಪಾರ್ಟಿಯು ಯಶಸ್ವಿಯಾಗಿ ಎದುರಿಸುವುದು.

ಎಡ ಶಕ್ತಿಗಳ ಐಕ್ಯರಂಗ ಮಾತ್ರ ಸಾಲದು. ಅದರೊಂದಿಗೆ ಪ್ರಗತಿಗಾಮಿ ಸ್ವತಂತ್ರರನ್ನು ಸೇರಿಸುವುದಗತ್ಯ. ಅವರು ಹಿಂದೆ ಕಾಂಗ್ರೆಸ್ಸಿನಲ್ಲಿದ್ದವರು.

ಕಾಂಗ್ರೆಸ್ಸಿನ ವರ್ಚಸ್ಸಿನಲ್ಲಿದ್ದ ಜನತೆಯನ್ನು ಸಂಯುಕ್ತ ಚಳುವಳಿಯಲ್ಲಿ ತರುವುದು ಅಗತ್ಯವಿದೆ. ಕಾಂಗ್ರೆಸ್ಸಿನೊಳಗೆ ಕೆಲವರು ಪ್ರಗತಿಗಾಮಿ ಧೋರಣೆಗಳಿಗೆ ಹೋರಾಡುತ್ತಿದ್ದಾರೆ. ನಾವು ಅವರನ್ನು ಸ್ವಾಗತಿಸುತ್ತೇವೆ. ಮತ್ತು ಜನತೆಯ ಮತ್ತು ದೇಶದ ದೃಷ್ಟಿಯಿಂದ ಅವರ ಜತೆಗೆ ಸಹಕರಿಸಲು ಪ್ರಯತ್ನಿಸುತ್ತೇವೆ.

ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ

ಎಲ್ಲ ಪಾರ್ಟಿ ಘಟಕವೂ, ಪಾರ್ಟಿ ಸದಸ್ಯನೂ ಬಲವಾದ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು, ಹೊಸ ಪ್ರದೇಶಗಳಿಗೆ ಹರಡಲು, ಮತ್ತು ಜನತೆಯಿಂದ ಹೊಸ ಶಕ್ತಿಯನ್ನು ಪಡೆಯಲು ಸರ್ವ ಪ್ರಯತ್ನ ಮಾಡಬೇಕೆಂದು ಪಾರ್ಟಿ ಅಧಿವೇಶನ ಕರೆ ಕೊಡುತ್ತದೆ. ಜನತೆಯ ಮತ್ತು ದೇಶದ ಹಿತ ರಕ್ಷಣೆಯಲ್ಲಿ ಪಾರ್ಟಿ ಸದಸ್ಯರು ಅಗ್ರ ಪಾತ್ರವಹಿಸಬೇಕು. ವಿಶ್ವ ಶಾಂತಿಗೂ, ರಾಷ್ಟ್ರದ ಸ್ವಾತಂತ್ರ ರಕ್ಷಣೆಗೂ, ಮತ್ತು ಐಕ್ಯತೆಗೂ, ಸಮಾಜವಾದ ಮತ್ತು ಸುಖಸಮೃದ್ಧಿಯ ಜೀವನ ಕಡೆಗೆ ಜನತೆಯನ್ನು ಮುಂದೊಯ್ಯಲು ಧೈರ್ಯದಿಂದ ಹೋರಾಡುವ ಪಕ್ಷ ಕಮ್ಯೂನಿಸ್ಟ್ ಪಾರ್ಟಿಯೆಂಬುದನ್ನು ತಮ್ಮ ನಿಸ್ವಾರ್ಥ ಕೆಲಸ, ಮುಂದಾಳುತ್ವ, ಮತ್ತು ತ್ಯಾಗದಿಂದ ಅವರು ತೋರಿಸಬೇಕು.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone: 3810